ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ - 'ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಸಿ. ನಾಣಯ್ಯ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 'ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ1997ನೇ ಸಾಲಿನ ಕರ್ನಾಟಕ ಸಿನಿಮಾಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ -

'ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ '1997ನೇ ಸಾಲಿನ ಕರ್ನಾಟಕ ಸಿನಿಮಾಗಳ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

5.50 ಪಿ.ಎಂ

ಉಪಾಧ್ಯಕ್ಷರು : ಈಗ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ ತಿದ್ದುಪಡಿ ವಿಧೇಯಕ 1997.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಇದು ನಾಗಮಾರಪಲ್ಲಿಯವರ ಬಿಲ್, ಈಗ ಮಂಜುನಾಥ್‌ರವರು ಇದನ್ನು ಒಪ್ಪಿಕೊಳ್ಳುತ್ತಾರೋ ಹೇಗೋ ಎಂಬುದು ಗೊತ್ತಾಗಬೇಕು. ಇದು ಲೋಕಶಕ್ತಿ ಬಿಲ್ ಇದೆ.

ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ ತಿದ್ದುಪಡಿ ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತ್ತು

+ ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಈ ತಿದ್ದುಪಡಿ ವಿಧೇಯಕ ಪರಿಷತ್ತಿನಲ್ಲಿ ಪಾಸಾಗಿರುವುದು. ಕೆಲವು ತಿದ್ದುಪಡಿಗಳನ್ನು ತರಬೇಕಾಗಿತ್ತು. ಗಂಧದಮರ ಸಾಗಿಸಬೇಕಾದರೆ ಅದನ್ನು ಹಿಡಿದು ಮುಟ್ಟು ಗೋಲು ಹಾಕಬಹುದು ಆದರೆ ಗಂಧದ ಎಣ್ಣೆ ಸಾಗಿಸುವಾಗ ಮುಟ್ಟುಗೋಲು ಹಾಕುವಂತಿಲ್ಲ, ಅದಕ್ಕೂ ಅವಕಾಶ ಕಲ್ಪಿಸಿ ಒಂದು ಪ್ರಾವಿಷನ್ ಮಾಡಲಾಗಿದೆ. ಆಮೇಲೆ ಗ್ರಾಮೀಣ ಅರಣ್ಯ ಸಮಿತಿ ರಚಿಸಬೇಕೆಂದು ಒಂದು ಪ್ರಾವಿಷನ್ ಮಾಡಿದ್ದೇವೆ. ಏಕೆಂದರೆ ನೆಡುತೋಪಾಗಲಿ ಗಿಡಮರಗಳಾಗಲಿ ಇವತ್ತು ಅರಣ್ಯನೌಕರರೇ ನೋಡಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಗ್ರಾಮೀಣ ಅರಣ್ಯ ಸಮಿತಿ ಮಾಡಿ ಅದಕ್ಕೂ ಜವಾಬ್ದಾರಿ ಕೊಡಬೇಕೆಂದು ಮಾಡಿದ್ದೇವೆ. ಅದೇರೀತಿ ನೌಕರರ ಕೃತ್ಯಗಳಿಗೆ ಶಿಕ್ಷೆ ವಿಧಿಸುವ ಒಂದು ಉಪಬಂಧ ಕಲ್ಪಿಸುವುದು. ಆಮೇಲೆ ಸಂರಕ್ಷಣಾಧಿಕಾರಿಗಳು ಅರ್ಜಿ ಸ್ವೀಕರಿಸಿದ ಮೂರು ತಿಂಗಳಲ್ಲಿ ವಿಲೇವಾರಿ ಮಾಡಬೇಕೆಂದು ಮಾಡಿದ್ದೇವೆ. ಕೆಲವು ಸಂದರ್ಭಗಳಲ್ಲಿ ನಡವಳಿಕೆಯನ್ನು ರದ್ದುಗೊಳಿಸುವಂತೆ ಅಥವಾ ತಡೆಹಿಡಿಯುವಂತೆ ಉಪಬಂಧ ಕಲ್ಪಿಸುವುದು. ಆಮೇಲೆ ಮರಗಳನ್ನು ಕೆಡವುವುದರಲ್ಲಿ ರಬ್ಬರ್ ಅಥವಾ ಟೀ ಸಾಗುವಳಿಗೆ ಅದರ ವಿಸ್ತರಣೆಗೆ ಇತರೆ ಮರಗಳನ್ನು ಕೆಡುವುವುದು ಒಳಗೊಂಡರೆ 8ನೇ ಪ್ರಕರಣದಡಿಯಲ್ಲಿ ಅನುಮತಿ ನೀಡುವುದನ್ನು ನಿಷೇಧಿಸುವುದು. ಇಷ್ಟು ತಿದ್ದುಪಡಿಗಳನ್ನು ತಂದಿದ್ದೇವೆ, ವಿಧಾನಪರಿಷತ್ತಿನಲ್ಲಿ ಪಾಸಾಗಿದೆ. ದಯವಿಟ್ಟು ಇದನ್ನು ಪಾಸು ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಉಪಾಧ್ಯಕ್ಷರೇ, ಇದರಲ್ಲಿ ಹೆಚ್ಚೂಕಡಿಮೆ 9 ತಿದ್ದುಪಡಿಗಳಿವೆ ಅವರು ಹೇಳಿದಂತೆ ಅವುಗಳಲ್ಲಿ ಪ್ರಮುಖವಾದದು ಫಾರೆಸ್ಟ್ ಉತ್ಪತ್ತಿಯಲ್ಲಿ ಗಂಧದೆಣ್ಣೆಯನ್ನು ಸೇರಿಸುವುದು ಆದರೆ ಪ್ರಮುಖವಾದದು ಏನೆಂದರೆ 31 ಎ ಪ್ರಕಾರ "Constitution of Village Forest Committee for joint forest planning and management of forests." ಇದರ ಕೆಳಗೆ ಒಂದು ಕಮಿಟಿ ಮಾಡಬೇಕೆಂದು ತಿಳಿಸಿದ್ದಾರೆ ಮತ್ತು ಅದರ ಕರ್ತವ್ಯವೇನು ಅವರ ಅಧಿಕಾರಗಳೇನು ಎಂಬುದೂ ಇದೆ. ನಾನು ಒಂದು ವಿಷಯವನ್ನು ಹೇಳಬೇಕಾಗಿದೆ ಏಕೆಂದರೆ ಸಮಸ್ಯೆಗಳು ಹೇಗೆ ಬರುತ್ತವೆಂದರೆ ಮಲೆನಾಡು ಪ್ರದೇಶದಲ್ಲಿ ಎಲ್ಲಿ ಇಂತಹ ಸಮಿತಿ ರಚನೆಯಾಗುತ್ತವೆ ಅಲ್ಲಿ ಹೆಚ್ಚು ಕಡಿಮೆ ಆಗುವ ಸಾಧ್ಯತೆ ಇದೆ. ಒಂದು ಏನೆಂದರೆ ಅಧಿಕಾರಿಗಳು ಸರಿಯಿದ್ದು ಅವರು ಸ್ಥಳೀಯ ನೀಡ್ ಅನ್ನು ಅರ್ಥ ಮಾಡಿಕೊಂಡು ನಡೆದುಕೊಳ್ಳುವವರಿದ್ದರೆ ಒಂದು ತರಹ, ಇಲ್ಲದಿದ್ದರೆ ಕಿರುಕುಳ ಕೊಡುವಂತಹ ಅಧಿಕಾರಿಗಳು ಯಾರಾದರೂ ಬಂದರೆ ಅಥವಾ ಸಣ್ಣಪುಟ್ಟ ಕೇಸ್‌ಗಳಲ್ಲಿ ಸಿಕ್ಕಿಹಾಕಿಸಬೇಕೆಂದು ಪ್ರಯತ್ನ ಮಾಡಿದರೆ ಇದರಲ್ಲಿ ಸಾಕಷ್ಟು ಅವಕಾಶ ಇದೆ. ಉದಾಹರಣೆಗೆ ತಾವೇನು ಮಾಡಿದ್ದೀರಿ "The powers, duties and responsibilities of the village Forest Planning Committee". Then, ``the conduct of elections to the Committee. Qualification and disqualification of the members of the village forest committee. ಸೇರಿಸಿಕೊಳ್ಳುವುದು, ಕಿತ್ತೊಗೆಯುವುದು ಇವೆಲ್ಲಾ ಇದರಲ್ಲಿ ಬರುತ್ತದೆ. ಅದಕ್ಕೆ

ನಾನು ಏನು ಹೇಳುತ್ತೇನೆ, ಸಮಿತಿಗೆ ಕೊಟ್ಟ ಅಧಿಕಾರ ದುರುಪಯೋಗವಾಗಬಾರದು ಅದಕ್ಕೆ ಬಹಳ ಕಡೆ ಸಾಧ್ಯತೆಯೂ ಇದೆ, ಈಗಾಗಲೇ ಅರಣ್ಯಾಧಿಕಾರಿಗಳು ತಮಗೇನು ಬೇಕೋ ಅದನ್ನೇ ಮಾಡುತ್ತಾರೆ. ಸಣ್ಣಕಾಡುಗಳಲ್ಲಿ ಯಾರಾದರೂ ದನ ಆಡು ಕುರಿಗಳನ್ನು ಬಿಟ್ಟರೆ ಅವರನ್ನು ಹಿಡಿದು ಕೂರಿಸುವುದು ದಂಡ ತೆಗೆದುಕೊಳ್ಳುವುದು ಸಂಜೆವರೆಗೆ ಅವರನ್ನು ನಿಲ್ಲಿಸುವುದು ತಲೆಮೇಲೆ ಕಟಿಗಿ ಹೊತ್ತುಬರುವ ಹೆಣ್ಣುಮಕ್ಕಳಿಗೆ ತೊಂದರೆ ಕೊಡುವುದು ಹೀಗೆ ಅನೇಕ ರೀತಿಯಲ್ಲಿ ಅರಣ್ಯಾಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ. ಈ ಕಮಿಟಿಯಾದಮೇಲೆ ಇದರ ಪರಿಸ್ಥಿತಿಯೇನು ? ಇದನ್ನು ಎಷ್ಟರಮಟ್ಟಿಗೆ ನಾವು ಸಾಧಿಸಬಹುದು ? ಯಾವ ಕಾರಣಕ್ಕಾಗಿ ಇಷ್ಟೊಂದು ವೈಡರ್‌ಕಮಿಟಿ ಮಾಡಿದ್ದೀರಿ ಎಂಬುದನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಸುಮ್ಮನೆ ಒಂದು ಕಮಿಟಿ ಮಾಡಿದ್ದೇವೆ, ಅಧಿಕಾರಿಯ ಜವಾಬ್ದಾರಿಯನ್ನು ಅರಣ್ಯ ಸಮಿತಿ ಮೇಲೆ ಹಾಕಿ ನಾನೇನು ಮಾಡಲಿ, ಇವೆಲ್ಲಾ ನಾನ್ ಅಫಿಷಿಯಲ್ ಬಾಡಿ ಇವೆ, ನಮ್ಮ ಮಾತು ಕೇಳುವುದಿಲ್ಲ ಎಂದು ಹೇಳಿಕೊಂಡು ಅಧಿಕಾರಿಗೆ ಯಾವ ಜವಾಬ್ದಾರಿ ಕೊಡಬೇಕೋ ಅದನ್ನು ತಪ್ಪಿಸುವ ಸಾಧ್ಯತೆ ಕಮಿಟಿ ಹೆಸರಿನಲ್ಲಿ ಆಗುವುದಿದೆ. ಇದರ ಬಗ್ಗೆ ತಾವು ಯೋಚನೆ ಏನು ಮಾಡಿದ್ದೀರಿ ಮತ್ತು ತಂಟೆಗಳನ್ನು ಸೆಟಲ್ ಮಾಡುವ ಅಧಿಕಾರವನ್ನೂ ಈ ಕಮಿಟಿಗಳಿಗೆ ಕೊಟ್ಟಿದ್ದೀರಿ. ಅರಣ್ಯದ ತಂಟೆಗಳು ಅನೇಕ ಸಾರಿ ಹೇಗಿರುತ್ತವೆಂದರೆ ಗಿಡ ಯಾರದೋ ಇರಬಹುದು, ಎಂತಹ ಗಿಡ ಕಡಿಯಬೇಕು ಎಂತಹವನ್ನು ಕಡಿಯಬಾರದೆಂದು ನಿಯಮ ಹಾಕಿದ್ದೀರಿ ಇದನ್ನು ಸೆಟಲ್ ಮಾಡುವ ಅಧಿಕಾರವೂ ಅವರಿಗೇ ಇದೆ. ಇವತ್ತು ಹಳ್ಳಿಗಳಲ್ಲಿ ಏನಾಗಿದೆ ಅಂದರೆ ರಾಜಕೀಯ ಪ್ರತಿಫೀಲ್ಡ್‌ನಲ್ಲೂ ಬರುತ್ತಿದೆ. ಹಳ್ಳಿಗಳಲ್ಲಿ ಗ್ರಾಮಪಂಚಾಯಿತಿಯಿಂದ ಜಿಲ್ಲಾಪಂಚಾಯಿತಿವರೆಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪಕ್ಷಾಧಾರಿತ ಚುನಾವಣೆ ನಡೆಸುತ್ತೇವೆ. ಆ ಕಾಲದಲ್ಲಿ ಕೆಲವು ಸಲ ಕಮಿಟಿಗಳಲ್ಲಿ ಇದ್ದವರು ತಮಗೆ ಆಗದವರ ಮೇಲೆ ಸೇಡು ತೀರಿಸಿಕೊಳ್ಳುವುದು, ಇಂಥವರಿಗೆ ಅನುಮತಿ ಕೊಡಬೇಡಿರಿ ಅನ್ನುವುದು ಅಥವಾ ಇಂಥವರಿಗೆ ಈ ಕೇಸಿನಲ್ಲಿ ಸಿಕ್ಕಿಹಾಕಿಸಿರಿ ಅನ್ನುವುದು ಇವೆಲ್ಲಾ ಬರುತ್ತದೆ. ಇಂತಹ ಅನಾಹುತ ಆಗದ ರೀತಿಯಲ್ಲಿ ಇದಕ್ಕೆ ಅಪೀಲು ಏನಿದೆ? ಯಾರ ಮುಂದೆ ಅವರು ಹೋಗಬೇಕು ಎಂಬುದನ್ನು ತಾವು ಹೇಳಬೇಕು. "Criminal liability of licence for acts of servants." Section 82-A. ಇದು ಹೊಸ ತಿದ್ದುಪಡಿ ಸೇರಿಸುತ್ತಿದ್ದೀರಿ ಇದರಲ್ಲಿ ಏನು ಹೇಳಿದೆ ಅಂದರೆ "Where any offence under this Act or Rules made thereunder is committed by any person in the employment and acting on behalf of the holder of the licence or permit granted under this Act, such holder shall also be punishable with a fine which may extend to Rs. 15,000/- as if he had committed such offence unless he establishes that all due and reasonable precautions were exercised by him to prevent commission of such offence provided that no person other than the actual offender shall be punishable with imprisonment except in default of payment of fine." ಇದರ ಕೆಳಗೂ ಒಂದೊಂದು ಸಲ ಏನಾಗುತ್ತದೆ ಅನ್ನುವ ಸಾಧ್ಯತೆ ಆಕ್ಚುಯಲ್ ಅಫೆಂಡರ್ಸ್ ಯಾರಿದ್ದಾರೆ ಅವರಿಗೆ ಶಿಕ್ಷೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಅನೇಕ ಸಾರಿ

ಬೇನಾಮಿ ವ್ಯವಹಾರಗಳು ಆಗುತ್ತವೆ ಎಕ್ಸೈಜ್‌ನಲ್ಲಿ ಹೇಗೆ ಆಗುತ್ತದೆ ನಮಗೆ ಗೊತ್ತಿದೆ. ಹರಾಜಿನಲ್ಲಿ ಭಾಗವಹಿಸುವವರೇ ಒಬ್ಬರು, ಲೈಸೆನ್ಸ್ ಹೋಲ್ಡರೇ ಒಬ್ಬರು ಆಮೇಲೆ ರಿಕವರಿಗೆ ಹೋದಾಗ ಆಕ್ಚುಯಲ್ ಅಫೆಂಡರ್ ಸಿಗುವುದೇ ಇಲ್ಲ, ಯಾರೋ ಸರ್ವೆಂಟ್ಸ್ ಅವರೋ ಇವರೋ... ಹಾಗೇ ಅರಣ್ಯದ ಕಂಟ್ರಾಕ್ಟರ್‌ಗಳೂ ಮಾಡುವ ಸಾಧ್ಯತೆ ಇದೆ, ಶಿಕ್ಷೆಗೆ ಸರ್ವೆಂಟ್ಸ್ ಬರಬಹುದು ಅಂದರೆ ಕಳ್ಳತನ ಮಾಡುವುದು, ಅದಕ್ಕೆ ಪ್ರೋತ್ಸಾಹ ನೀಡುವುದು ಫಾರೆಸ್ಟ್ ಕಂಟ್ರಾಕ್ಟರ್ ಮಾಡುವ ಸಾಧ್ಯತೆ ಇದೆ. ಅದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಬೇನಾಮಿ ವ್ಯವಹಾರಗಳು ಎಕ್ಸೈಜ್ ಇಲಾಖೆಯಂತೆ ಇಲ್ಲೂ ಸಾಧ್ಯವಾಗುತ್ತದೆ. ಮತ್ತು ಅದರಿಂದ ಮೇನ್ ಅಫೆಂಡರ್ ತಪ್ಪಿಸಿಕೊಂಡು ಸಾಮಾನ್ಯ ನೌಕರಿ ಮಾಡತಕ್ಕಂಥ ಒಬ್ಬ ಬಡವ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ಅದಕ್ಕೋಸ್ಕರ ಇದರ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವನ್ನು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅನಂತರ, 82(ಬಿ)ನಲ್ಲೂ ಕೂಡ ಅಫೆನ್ಸ್ ಬೈ ಕಂಪನಿಸ್ ಎಂದು ಇದೆ, ಅದರಲ್ಲಿಯೂ ಇದೇ ರೀತಿ ಬರುತ್ತದೆ. 82 (ಎ)ನಲ್ಲಿ ಯಾವ ರೀತಿಯಾಗಿ ಬೇನಾಮಿಯಾಗುವ ಸಾಧ್ಯತೆ ಇದೆಯೋ, ಕಂಪನಿಸ್‌ನಲ್ಲೂ ಕೂಡ ಅವರ ರೆಪ್ರಸೆಂಟೇಟಿವ್, ಮ್ಯಾನೇಜಿಂಗ್ ಡೈರೆಕ್ಟರ್ ಅಥವಾ ಅಲ್ಲಿರತಕ್ಕ ಯಾವುದೇ ಒಂದು ಕಂಪನಿಗೆ ಯಾರು ಮುಖ್ಯಸ್ಥರಿರುತ್ತಾರೆ, ಎಕ್ಸಿಕ್ಯೂಟಿವ್ ಡೈರೆಕ್ಟರ್ ಇರುತ್ತಾರೋ ಅವರಿಗೆ ನೀವು ಪನಿಷ್‌ಮೆಂಟ್ ಕೊಡದೇ ಹೋದರೆ, ಯಾರೇ ಅವರ ಪರವಾಗಿ ಬರಲಿ, ಅಂತಹವರ ಮೇಲೆ ಶಿಕ್ಷೆ ವಿಧಿಸುತ್ತೇವೆಂಬ ಮಾತನ್ನು ಹೇಳಿದರೆ ಸಾಕಷ್ಟು ಜನರು ಕೋಟಿಗಟ್ಟಲೆ ಆಸ್ತಿಯನ್ನು ಸಾಗು ಮಾಡಿಕೊಂಡು ಕೊನೆಗೆ ಯಾರನ್ನಾದರೂ ಕೋರ್ಟ್ ಮುಂದೆ ನಿಲ್ಲಿಸಿ ಅವರಿಗೆ ಶಿಕ್ಷೆ ಕೊಡಿಸಿದಂತಾಗುತ್ತದೆಂಬುದನ್ನು ತಿಳಿಸಬಯಸುತ್ತೇನೆ. ಇದರ ಬಗ್ಗೆಯೂ ಕೂಡ ತಾವು ಹೇಳಬೇಕು. ಇದರಲ್ಲಿ ಡೈರೆಕ್ಟರ್ ಆಗಲಿ, ಮ್ಯಾನೇಜರ್ ಆಗಲಿ, ಎಕ್ಸಿಕ್ಯೂಟಿವ್ ಆಗಲಿ ಅಥವಾ ಎಂ.ಡಿ.ಆಗಲೀ ಯಾರನ್ನು ನಿಗದಿಪಡಿಸಲಾಗಿದೆಯೆಂದು ತಾವು ಸ್ಪಷ್ಟಪಡಿಸಬೇಕು. ಇನ್ನೊಂದು ವಿಷಯ ಏನು ಹೇಳಿದ್ದೀರೆಂದರೆ, ಪುಟ 7ರಲ್ಲಿ ಸೆಕ್ಷನ್ 8(ಎ) cancellation or Suspension of Permission granted under Section 8. ಇದರಲ್ಲೂ ಕೂಡ ಒಂದು ಸಾಧ್ಯತೆ ಏನಿದೆಯೆಂದರೆ, ನಿಜವಾಗಿಯೂ ಯಾರಿಗೆ ಈ ಕಾನೂನಿನ ಅವಶ್ಯಕತೆ ಇರುತ್ತದೋ ಅವರಿಗೆ ಈ ಕಾನೂನಿನ ಬಲದಿಂದ ತೊಂದರೆಯಾಗಬಾರದು. ಕೆಲವು ಕಡೆಗಳಲ್ಲಿ ಅವರ ಸ್ವಂತ ಗಿಡಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ, ಅದಕ್ಕಾಗಿ ಒಂದು ಅಪ್ಲಿಕೇಷನ್ ಕೊಟ್ಟಿರುತ್ತಾನೆ. ಆದರೆ, ನೀವು ಇದರಲ್ಲಿ ಏನು ನಮೂದು ಮಾಡಿದ್ದೀರೆಂದರೆ, ಅದು ರೆವಿನ್ಯೂ ಆಫೀಸರ್ ಅವರಿಂದ ಬರಬೇಕು ಮುಂತಾದ ಏನೇನೋ 3-4 ಷರತ್ತುಗಳನ್ನು ಹಾಕಿರುತ್ತಾರೆ, ಬೇಕಾದರೆ ನೋಡಿಕೊಳ್ಳಿ. ತಮಗೆ ಒಂದರೆಡು ಉದಾಹರಣೆಗಳನ್ನು ಹೇಳುತ್ತೇನೆ. ಕ್ಯಾನ್ಸಲೇಷನ್ ಯಾವಾಗ ಮಾಡಬಹುದು ಎನ್ನುವುದಕ್ಕೆ ತಾವು ಏನು ಹೇಳಿದ್ದೀರೆಂದರೆ, 'Furnishing of false information', alright, you cancel it. 'Discovery of defects in title' ಅನೇಕ ಸಲ ಏನಾಗುತ್ತದೆಂದರೆ, ಈ ಟೈಟಲ್‌ನಲ್ಲಿ ಮ್ಯುಟೇಷನ್ ಆಗುವುದಿಲ್ಲ, ಅಂತಹ ಸಮಯದಲ್ಲಿ ಅಧಿಕಾರಿಗಳು ತೊಂದರೆ ಕೊಡುವ ಸಾಧ್ಯತೆ ಇದೆ. ಅಲ್ಲದೆ, ಟೆನೆಂಟ್ ಕೇಸ್‌ನಲ್ಲೂ ತೊಂದರೆಯಾಗುವ ಸಾಧ್ಯತೆಯಿದೆ. ಟ್ರಾನ್ಸಾಕ್ಷನ್ ಪಿರಿಯಡ್‌ನಲ್ಲಿ ಅನೇಕ ಸಾರಿ ಪರ್ಚೇಸ್ ಮಾಡಿದ ನಂತರ ಮ್ಯುಟೇಷನ್ ಆಗುವುದಕ್ಕೆ ಸುಮಾರು ಒಂದರೆಡು ವರ್ಷಗಳಿಂದ ನಾಲ್ಕು ವರ್ಷಗಳವರೆಗೆ ಸಮಯ ತೆಗೆದುಕೊಂಡ ಪ್ರಕರಣಗಳೂ ತಮಗೆ ಗೊತ್ತಿದೆ.

ಕೆಲವು ಕಡೆ ಸಕ್ಸೆಷನ್ ಸರ್ಟಿಫಿಕೇಟ್ ಅನ್ನು ಕೋರ್ಟ್‌ನಿಂದ ತಂದು ಕೊಡುವವರೆಗೂ ಅನೇಕ ಕಡೆ ಮ್ಯುಟೇಷನ್ ಆಗುವುದಿಲ್ಲ. ಆ ಅವಧಿಯಲ್ಲಿ ಸದರಿ ಕಾನೂನು ಮಿಸ್‌ಯೂಸ್ ಆಗುವ ಸಾಧ್ಯತೆ ಇದೆ. ಅದಕ್ಕೋಸ್ಕರ ತಾವು ಅದಕ್ಕೆ ಏನು ಪ್ರಾವಿಷನ್ ಮಾಡುತ್ತೀರಿ? ಅದರ ಬಗ್ಗೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ, ವೆರಿಫೈ, ಎನ್‌ಕ್ವೈರಿ ಮಾಡುವಂಥ ವ್ಯವಸ್ಥೆ ಮಾಡುತ್ತೀರಾ? ಹೇಗೆ ಎನ್ನುವುದರ ಬಗ್ಗೆಯೂ ಇದರಲ್ಲಿ ತಿಳಿಸಿಲ್ಲ.

SRI M.C. NANAIAH : Even before permission is accorded to fell a tree, unless the Divisional Forest Officer Inspects - he should go there and do that. ಅಲ್ಲಿಗೆ ಹೋಗಿ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಲೇಬೇಕಾಗುತ್ತದೆ. ಈಗ ಏನಾಗುತ್ತದೆಂದರೆ, ಕೆಲವು ಸಮಯದಲ್ಲಿ ವಿಲ್‌ಫುಲ್ ಆಗಿ ಯಾವುದೋ ಸಂಬಂಧಪಟ್ಟ ಟೈಟಲ್ ಅನ್ನು ಅಥವಾ ಫೇಕ್ ಟೈಟಲ್ ಅನ್ನು, ಫ್ಯಾಬ್ರಿಕೇಷನ್ ಟೈಟಲ್ ಅನ್ನು ಕೊಟ್ಟಾಗ ಆಟೋಮೆಟಿಕಲಿ ಇನ್ನೊಬ್ಬ ಅದಕ್ಕೆ ಅರ್ಜಿ ಹಾಕಿದಾಗ ತಕ್ಷಣ ಪರ್ಮಿಷನ್ ಕೊಟ್ಟಿರುವುದನ್ನು ವಿತ್‌ಡ್ರಾ ಮಾಡಿರುವಂಥ ಪ್ರಕರಣವೂ ಇದೆ. It is only to safeguard.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಒಪ್ಪುತ್ತೇನೆ, ಅದಕ್ಕೋಸ್ಕರ ನಾನು ಫೇಕ್ ಬಗ್ಗೆ ಹೇಳಲಿಲ್ಲ. ಫೇಕ್ ಇರುವುದನ್ನು ನೀವು ಕ್ಯಾನ್ಸೆಲ್ ಮಾಡಿದ್ದೀರಿ. ಆದರೆ, ಮ್ಯುಟೇಷನ್, ಸಕ್ಸೆಷನ್ ಆಗಲಿಲ್ಲವೆಂದರೆ ಬಹಳ ಸಲ ಟೆನೆಂಟ್ಸ್ ಸೇರಿದಂತೆ ಮುಂತಾದ ಸಮಸ್ಯೆಗಳು ಬರುತ್ತದೆ. ಅಂತಹ ಸಮಯದಲ್ಲಿ ಅಧಿಕಾರಿಗೆ ಅಷ್ಟೇ ಬೇಕಾಗಿರುವುದು, ಹಣ ತೆಗೆದುಕೊಳ್ಳದೆ ಮಾಡುವುದಿಲ್ಲ, ಸತಾಯಿಸುತ್ತಾನೆ, ತೊಂದರೆ ಕೊಡುತ್ತಾನೆ. ಅದಕ್ಕಾಗಿ ಈ ಒಂದು ಸೆಕ್ಷನ್‌ನಿಂದ ನಿಜವಾಗಿಯೂ ಯಾರು ಲ್ಯಾಂಡ್ ಓನರ್ ಇರುತ್ತಾರೆ, ಯಾರದು ಗಿಡ ಇರುತ್ತದೆಯೋ ಅವರಿಗೆ ತೊಂದರೆಯಾಗಬಾರದೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದರ ಬಗ್ಗೆ ತಾವು ಸ್ಪಾಟ್ ಎನ್‌ಕ್ವೈರಿ ಮಾಡಿಸುವ ಯಾವುದೇ ಪ್ರಾವಿಷನ್ ತಂದಿರುವುದು ನಾನು ಕಂಡಿಲ್ಲ. ಅಲ್ಲದೆ, ಅಡ್ಮಿನಿಸ್ಟ್ರೇಟಿವ್ ಗೈಡ್‌ಲೈನ್ಸ್ ಒರಿಜಿನಲ್ ಆ್ಯಕ್ಟ್‌ನಲ್ಲಿ ಇಲ್ಲ. ಅದನ್ನು ತಾವು ರೂಲ್ಸ್‌ನಲ್ಲಿ ತಂದರೆ ಒಳ್ಳೆಯದು. ಏಕೆಂದರೆ, ಅನೇಕ ಸಾರಿ ಗೈಡ್‌ಲೈನ್ಸ್, they may follow or they may not follow because there is no mandatory provision. ಅದಕ್ಕೆ ಬೇಕಾದರೆ ಒಂದು ಮ್ಯಾಂಡೇಟರಿ ಪ್ರಾವಿಷನ್ ಅಥವಾ ರೂಲ್ಸ್ ಮಾಡಿದರೆ ಒಳ್ಳೆಯದಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ತಂದಿರುವ ಕಾನೂನು ಒಳ್ಳೆಯದಿದ್ದರೂ ಕೂಡ ಕೆಲವು ವೇಳೆ ಮಿಸ್‌ಯೂಸ್ ಆಗುವ ಸಾಧ್ಯತೆ ಇದೆ. ಆದುದರಿಂದ, ಅದನ್ನು ನೀವು ಹೇಗೆ ಪ್ರಿವೆಂಟ್ ಮಾಡುತ್ತೀರಿ ಎಂಬುದರ ಕಡೆ ಗಮನಹರಿಸಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮೂಲಭೂತವಾದ ಪ್ರಶ್ನೆಯೇನೆಂದರೆ, ಎರಡು ಆ್ಯಕ್ಟ್ ಅನ್ನು ಒಂದರಲ್ಲೇ ತಂದಿದ್ದೀರಿ. ಎಷ್ಟು

ಗೊಂದಲವಿದೆಯೆಂದರೆ ಎರಡೂ ಆ್ಯಕ್ಟ್‌ನ ಆಬ್ಜೆಕ್ಟ್‌ಗಳಲ್ಲೂ ಕೂಡ ಬಾರ್ ಅನ್ನು ಏತಕ್ಕೆ ರಿಮೂವ್ ಮಾಡಲಾಗುತ್ತಿದೆಯೆಂಬುದನ್ನೂ ತಿಳಿಸಿಲ್ಲ, ಆದರೂ ಇದನ್ನು ತೆಗೆದುಕೊಂಡು ಬಂದಿದ್ದೀರಿ. ಇದರ ಬಗ್ಗೆ ಆಬ್ಜೆಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ ಎಲ್ಲಿಯೂ ಕೂಡ ತಿಳಿಸಿಲ್ಲ. ಅನಂತರ, ಒರಿಜಿನಲ್ ಆ್ಯಕ್ಟ್‌ಗೆ ನೀವು ಇನ್‌ಕ್ಲೂಡ್ ಮಾಡುವಾಗ ಸೆಕ್ಷನ್ 18 ಅನ್ನು ಇನ್‌ಕ್ಲೂಡ್ ಮಾಡುತ್ತೇವೆಂದು ಹೇಳುತ್ತೀರಿ. In clause 18, after the words place... ಅದಕ್ಕಿಂತ ಮುಂಚೆ ಆಫ್ಟರ್ ಕ್ಲಾಸ್ 22 ಎಂದು ಹೇಳುತ್ತೀರಿ, ಇವೆಲ್ಲವೂ ಕೂಡ ಒರಿಜಿನಲ್ ಆ್ಯಕ್ಟ್ ಏನಿದೆ, ಇನ್ ಸಬ್ ಕ್ಲಾಸ್ (ಬಿ) ಆಫ್ಟರ್ ಐಟಂ 4 ಎಂದು ಹೇಳುತ್ತೀರಿ, ಇದರಲ್ಲಿ ಒರಿಜಿನಲ್ ಆ್ಯಕ್ಟ್ ಅನ್ನು ಪ್ರಿಂಟ್ ಮಾಡಿಲ್ಲ. Why it is so? I don't understand ಇಲ್ಲದಿದ್ದರೆ ನಮಗೆ ಆ ಒರಿಜಿನಲ್ ಆ್ಯಕ್ಟ್ ಅನ್ನು ನೀವು ಒದಗಿಸಿಕೊಡಬೇಕು. We must know what it is. In Annexure `Forest Produce includes' Section 7A ಹೇಳಿದ್ದೀರಿ. ಸೆಕ್ಷನ್ 7(ಎ) ನಂತರ ಒಂದು ಕಡೆ 7(ಎ) ಅಮೆಂಡ್ ಮಾಡುತ್ತಿದ್ದೀರಿ, ಮತ್ತೊಂದು ಕಡೆ (ಬಿ) ಅನ್ನೂ ಕೂಡ ಅಮೆಂಡ್ ಮಾಡುತ್ತಿದ್ದೀರಿ. In Sub Clause (b) After Item 4 the following shall be inserted namely ನಾವು ಆಕ್ಟ್ ಅನ್ನು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಅದರ ಕಂಟೆಂಟ್ಸ್ ಏನಿದೆ, ಮತ್ತು ಅದರ ಬ್ಯಾಕ್‌ಗ್ರೌಂಡ್ ಗೊತ್ತಿಲ್ಲದಿದ್ದರೆ ನೀವು ಏಕೆ ಇನ್‌ಕ್ಲೂಡ್ ಮಾಡುತ್ತಿದ್ದೀರೆಂಬುದೂ ಕೂಡ ಗೊತ್ತಾಗುವುದಿಲ್ಲ. ನೀವು ಮಾಡಬೇಕಾದರೆ what was original Section and why it was inserted later, ಇದನ್ನು ಹೇಳಬೇಕಾಗಿತ್ತು. ಅದು ಮಿಸ್ಸಿಂಗ್ ಯಾರು ನೋಡುತ್ತಿದ್ದಾರೆಂಬುದೂ ಕೂಡ ಅರ್ಥವಾಗುತ್ತಿಲ್ಲ. ಆದರೆ, ಇದನ್ನು ಮಾಡುವುದಕ್ಕೆ ಹೇಳುತ್ತಿಲ್ಲ, ಇನ್ನು ಮುಂದೆ ನೀವು ಕಾನೂನು ತರತಕ್ಕಂಥ ಸಂದರ್ಭದಲ್ಲಿ kindly instruct. ಇಲ್ಲದಿದ್ದರೆ ಅಮೆಂಡ್‌ಮೆಂಟ್ ತರುವ ಕಾಲದಲ್ಲಿ ನಮಗೆ ಫಾರೆಸ್ಟ್‌ನ ಒರಿಜಿನಲ್ ಆ್ಯಕ್ಟ್ ಅನ್ನು ನಮಗೆ ದಯವಿಟ್ಟು ಸಪ್ಲೈ ಮಾಡಿ, ಹಿಂದಿನ ದಿವಸ ನಮಗೆ ಸಪ್ಲೈ ಮಾಡಿದ್ದರೆ ಅನುಕೂಲವಿರುತ್ತಿತ್ತು, ಲೈಬ್ರರಿಯಲ್ಲೂ ಅದು ಇಲ್ಲ, our library is so inadequate ಪ್ರತಿಯೊಬ್ಬ ಸದಸ್ಯರಿಗೂ ಆ್ಯಕ್ಟ್ ಸಿಗುವುದಿಲ್ಲ. ಆದುದರಿಂದ, ಈ ಸಂದರ್ಭದಲ್ಲಿ ನೀವು ಏಕೆ ಅಮೆಂಡ್‌ಮೆಂಟ್ ಮಾಡುತ್ತಿದ್ದೀರಿ ಎಂಬ ಬಗ್ಗೆ ಇದರಲ್ಲಿ ಪ್ರಾವಿಷನ್ ಮಾಡಿಲ್ಲ. I want to know why Cocoabeans after clause (b) ಇವೆಲ್ಲವನ್ನೂ ಇನ್‌ಕ್ಲೂಡ್ ಮಾಡಲಾಗಿದೆಯೆಂದು ಹೇಳುತ್ತೀರಿ. ಒಂದು ಕಡೆ ಫಾರೆಸ್ಟ್ ಪ್ರೊಡ್ಯೂಸ್‌ನಲ್ಲಿ ಮೊದಲು ಇನ್‌ಕ್ಲೂಡ್ ಆಗಿದ್ದನ್ನು ಒಮಿಟ್ ಮಾಡುತ್ತಿದ್ದೀರಿ. Reason is not forthcoming as to why you are doing it. There must be some reason. Section Clause 2. In Sec. 2 in Clause 7. In one place, Sub Clause the words 'Cocoabeans or pods shall be omitted. Then After Clause 7, in sub Clause (b) after item No.4 following shall be inserted'. ಇದರ ಜೊತೆಗೆ ಇನ್ನು ಮೂರು 'garcinia fruits, thornless bamboos. Halmaddi Raldhupa and Kaidhupa' ಇವೆಲ್ಲಾ ಇನ್‌ಕ್ಲೂಡ್ ಮಾಡುತ್ತಿರುವುದರಿಂದ ರೀಸನ್ಸ್ ಕೊಡಬೇಕಲ್ಲಾ Is it your case that they were omitted earlier or is it your case that they are also Forest goods but by mistake it has been omitted. ಎನ್ನುವುದರ ಬಗ್ಗೆ

ರೀಸನ್ಸ್ ಕೊಟ್ಟಿಲ್ಲ, ಇದರ ಬಗ್ಗೆ ಆಬ್ಜೆಕ್ಟ್ಸ್‌ನಲ್ಲೂ ಕೂಡ ಹೇಳಿಲ್ಲ. We do not know why it has been included and for what purpose. And then ವಿಲೇಜ್ ಫಾರೆಸ್ಟ್ ಕಮಿಟಿ ಎಂದು ಹೇಳಿದ್ದೀರಿ, ಆದರೆ, ಕ್ಲಾಸ್ 22 ಎಲ್ಲಿದೆ? Where, after which clause 22? ನೀವು ತಕ್ಷಣ ನಿಮ್ಮ ಅನೆಕ್ಷರ್‌ನಲ್ಲಿ 18 ಆದ ನಂತರ you go to Section 41-Penalties. Nowhere you say, what is clause 22 and why you want to include sec. 21 (a) ಇದು ನಮಗೆ ಅರ್ಥವಾಗುವುದಿಲ್ಲ. It is a very vague thing. What was in Sec. 22, should we not know? ನಮಗೆ ಇದು ಅರ್ಥ ಆಗುವುದಿಲ್ಲ. ಸಿಸ್ಟಮ್ಯಾಟಿಕ್ ಆಗಿ ಓದುವವರಿಗೆ ಅಥವಾ ನೋಡುವವರಿಗಾದರೂ ಅರ್ಥ ಆಗಬೇಕು. ಇದು ಎರಡೂ ಇಲ್ಲ. ಏನೋ ಹೇಳಿದರು, ಲೆಜಿಸ್ಲೇಚರ್‌ನಲ್ಲಿ ಮಾಡಿದರು ಎಂದು ಆಗಬಾರದು. ರೆಲಿವೆನ್ಸಿ, ಕಾಂಟೆಕ್ಸ್ಟ್ ನೋಡದೇ ನೀವು ಏನೋ ಮಧ್ಯೆ ಇನ್‌ಸರ್ಟ್ ಮಾಡುತ್ತೀರಿ ಎಂದರೆ ಹೇಗೆ? ರೂಲ್ಸ್ ಫ್ರೇಮ್ ಮಾಡುವುದಕ್ಕೆ ಆ್ಯಕ್ಟ್‌ನಲ್ಲಿ ಪ್ರಾವಿಷನ್ ಇಲ್ಲವೇ? As far as possible rule making power should be there in the Act. The legislation should be minimum and lesser number of words should be used. That is the art of legislation. Rule making power could have been provided under Section 31A. But you have included extra items like the powers and duties of Forest Officer, which I am really not able to understand.

SRI M.C. NANAIAH (Minister for Law and Parliamentary Affairs) : As far as framing of rules is concerned, rules can be framed only in respect of provisions in the Act. If there are no provisions, rules cannot be framed. So, we have made a provision for framing of rules now in respect of the existing provisions in the existing Act. Section 31A is a new Section. With a view to make rules for Section 31A, a separate clause will have to be added in respect of 31A. That is the reason it has been added.

ಶ್ರೀಮತಿ ಪ್ರಮೀಳಾ ನೇಸರ್ಗಿ : ಒರಿಜಿನಲ್ ಸೆಕ್ಷನ್‌ನಲ್ಲಿ ರೂಲ್ ಮೇಕಿಂಗ್ ಪವರ್ ಇದೆಯಲ್ಲಾ, ಅಲ್ಲಿ 31ಎ ಆ್ಯಡ್ ಮಾಡಬಹುದಿತ್ತಲಾ. Why further additions? ಇಷ್ಟು ಬೇಕಿತ್ತಾ, ಒಂದು ಪೇಜ್ ಬೇಕಾಗಿತ್ತೇ ಎಂದು ನಾನು ಕೇಳುತ್ತಿದ್ದೇನೆ. Is it relevant or necessary to add all these things here? On the other hand, you could have included in the original Act where rule making power is there. ರೂಲ್ 31ಎ ಪ್ರಕಾರ ರೂಲ್ಸ್ ಮಾಡಬಹುದು ಎಂದು ಹೇಳಬಹುದಾಗಿತ್ತು. All that I am saying is you could have avoided printing of more pages and ask people to read more. ಒಂದು ಕಡೆ ರೂಲ್ ಮೇಕಿಂಗ್‌ನಲ್ಲಿ ಒಂದು ತರಹ ಹಾಕುವುದು, ಇನ್ನೊಂದು ಕಡೆ ಇನ್ನೊಂದು ತರಹ ಸೇರಿಸುವುದು it is not advisable. ಆಮೇಲೆ "in Section 41, sub-section (2) shall be omitted" ಎಂದು ಹೇಳಿದ್ದೀರಿ ಏಕೆ?

What is the reason? At the same time in section 50, in sub-section (2) in clause (k-a) in the brackets, after the word 'Licence', the words ``or to get it renewed" shall be inserted. None of these things are explained. ಇಂಟ್ರಡ್ಯೂಸ್ ಮಾಡುವಾಗ ಯಾರಾದರೂ ಎಕ್ಸ್‌ಪ್ಲೈನ್ ಮಾಡಬೇಕು, At least it must have found a place in the objects and reasons. ಯಾವ ತಿದ್ದುಪಡಿ ಮಾಡಬೇಕಾದರೂ ಕೂಡ ಯಾವ ಕಾರಣಕ್ಕೋಸ್ಕರ ತರುತ್ತಿದ್ದೇವೆ ಎಂದು ತಾವು ಹೇಳಬಹುದಾಗಿತ್ತು. ಇದರಲ್ಲಿ ಎಲ್ಲೂ ಕೂಡ ಕಾಣುತ್ತಿಲ್ಲ. ಅದೇ ತರಹ ಸೆಕ್ಷನ್ 62 : in sub -section (1) for the words ``cattle used" the words, ``cattle or any other property used" shall be substituted. ಅಂದರೆ ಕ್ಯಾಟಲ್ ಅಥವಾ ಎನಿ ಅದರ್ ಪ್ರಾಪರ್ಟಿ ಯೂಸ್ಡ್ ಎಂದಾಗ ಪ್ರಾಣಿಗಳನ್ನೋ ಅಥವಾ ಬೇರೆ ವಸ್ತುಗಳನ್ನು ಈಕ್ವೇಟ್ ಮಾಡುತ್ತಿದ್ದೀರೋ? ಅಥವಾ ಪ್ರಾಣಿಗಳು ಬೇರೆ ಅಥವಾ any other property ಎಂದು ಹೇಳುತ್ತೀರೋ? I am not able to understand what do you mean by cattle or any other property. You must explain Section 62. Further, in Section 62, the words starting with "shall place" and ending with the words "so seized and shall be omitted. I am unable to understand this. After omission what is the alternative? Nothing is known.

Then, in clause (a), after the word "ivory", the words "Gulmavu (machilus macrantha) bark, Dalchini bark, Halmaddi (exudation of Ailanthus malabaricum), canes" shall be inserted. Is it your case that these are also forest produce? Please explain. It will be very difficult when the matter comes up before the Court. Therefore, you have to explain this.

In Section 63, after the words "release the same on", the words "produciton of a Bank guarantee equal to the value as estimated by such officer.....`` Why bank guarantee is needed when people are prepared to give immovable property as security? That is more secure. Why insist on bank guarantee? Instead of bank guarantee which is a dead investment, they give an equal amount of cash. Ultimately, if they are found not guilty, who will give the interest? In the court either they may insist for bank guarantee or any other immovable property to the satisfaction of the officer. If the bank guarantee is not renewed it will lapse automatically after one year. Let them take cash as security without insisting on the bank guarantee. Otherwise, it will pose lot of headache. When criminal proceedings are initiated and the property is produced before the court, the security to be given will be subject to the satisfaction of the magistrate concerned. So, you need not give security to the forest officer, also

the magistrate before whom the criminal proceedings are placed. It will cause hardship. If Magistrate has given, they should not insist on giving bank guarantee to the officer also because we can always give bank guarantee and take possession of the property.

Then, 64A. after the words "reserved forest" in the two places where they occur, the words ``district forest, village forest, protected forest and any other land under the control of the Forest Department" shall be inserted. Why are you taking out the reserved forest? The reason, it has got something beyond.

SRI M.C. NANAIAH : Reserve forest doesn't include village forest, district forest. With a view to enlarge the scope of the forest, we are including all other forests. Any forest which is notified under the Forest Act shall be considered as a forest.

6.20 ಪಿ.ಎಂ

SMT. PRAMILA NESARGI : Then half of Bangalore will also be covered under the Forest Act. Why I am saying this is districts were there in the Forest Act. Whether there is need to include district forests now. Before that, you said that you will constitute Committees under Section 31A- Constitution of Village Forest Committee for Joint Forest Planning and Management of Forest". ಫಾರೆಸ್ಟ್ ಲ್ಯಾಂಡನ್ನು ಕೊಡಲು ಕಮಿಟಿ ಮಾಡಿ, ಅದರ ಮುಖಾಂತರ ಕೊಡಲು ಸಮಿತಿಗೆ ಮೊನ್ನೆ ರೆಫರ್ ಆಗಿದೆಯಲ್ಲಾ. Is there background for this? I just want to know. ನೀವು ಎಕ್ಸ್‌ಪ್ಲೇನ್ ಮಾಡಿದ್ದರೆ ನಮಗೆ ತೊಂದರೆಯೇ ಇರುತ್ತಿರಲಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ದಯವಿಟ್ಟು ಕೇಳಿ. ಕೇಂದ್ರ ಸರ್ಕಾರದವರು ಒಂದು ನ್ಯಾಷನಲ್ ಫಾರೆಸ್ಟ್ ಪಾಲಿಸಿಯನ್ನು ಎವಾಲ್ವ್ ಮಾಡಿದ್ದಾರೆ. ಎಲ್ಲಾ ರಾಜ್ಯ ಸರ್ಕಾರಗಳೂ ಕೇಂದ್ರ ಸರ್ಕಾರದ ಮಾರ್ಗಸೂಚಿಗನುಗುಣವಾಗಿ ತಮ್ಮ ತಮ್ಮ ವಿಧೇಯಕಗಳಲ್ಲಿ ತಿದ್ದುಪಡಿ ತರಬೇಕೆಂದು ಹೇಳಿದ್ದಾರೆ. ಇದಕ್ಕನುಗುಣವಾಗಿ 1993ನೇ ಇಸವಿಯಲ್ಲಿ ಅಂದಿನ ಸರ್ಕಾರ ಒಂದು ನೋಟಿಫಿಕೇಷನ್ ಇಶ್ಯೂ ಮಾಡುವುದರ ಮುಖಾಂತರ ಈ ಫಾರೆಸ್ಟ್ ಕಮಿಟಿಯನ್ನು ನೇಮಕ ಮಾಡಿದ್ದಾರೆ.

This Forest Committee has already been constituted by the then Government in the year 1993. But that notification was in the form of a Government Order. So, we have to give statutory status to that by including it now in the Act. This is all. This is in consonance with the guidelines issued by Government of India.

SMT. PRAMILA NESARGI : All that I am saying is, had you stated that is view of the national forest policy that has been evolved by the Central Government and as the notification is already in existence, to give statutory status this has been done, then the argument would not have arisen.

SRI M.C. NANAIAH : I will take care of your suggestion. Hereafter while amending all these things to include under the object column so that there may not be any discussion at all.

SMT. PRAMILA NESARGI : Then, Section -82A - Criminal liability of licence for acts of servants. I am surprised about this. This is vicarious liability. You cannot bring amendment to the Criminal Law here. According to me, it will not stand the scrutiny in the Court of Law. Criminal laibility cannot be foisted on others. ನೀವು ಇಲ್ಲಿದ್ದೀರೀ, ಆದರೆ, ಫಾರೆಸ್ಟ್‌ನಲ್ಲಿ ಯಾರೋ ಏನೋ ಮಾಡುವುದು then you will also be held responsible. Be careful. Anyone can be booked. ಯಾರು ಎಲ್ಲಿದ್ದರೂ ಕೂಡ ಅನಗತ್ಯವಾಗಿ ಅವರನ್ನು ತರಬಹುದಾಗಿದೆ. Criminal liability is a new liability which cannot be foisted on others. ಸೆಕ್ಷನ್ 34ರ ಪ್ರಕಾರ ತರುತ್ತೇವೆಂದು ಹೇಳುತ್ತಿದ್ದೀರಿ. ರೆಸ್ಪಾನ್ಸಿಬಿಲಿಟಿ ತರುವುದಕ್ಕೋಸ್ಕರ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಅದನ್ನು ಮಾಡುವುದಕ್ಕಾಗುವುದಿಲ್ಲ, ಟ್ರಾನ್ಸ್‌ಫರೆನ್ಸಿ ಬೇಕಾಗುತ್ತದೆ. ಟ್ರಾನ್ಸ್‌ಫರೆನ್ಸಿ ಇದೆಯೆಂದು ಹೇಳುತ್ತಿದ್ದೀರಿ, ಮೆನ್ಸ್‌ರಿಯಾ ಕೂಡ ಇದರಲ್ಲಿ ಕಾಣಿಸುತ್ತಿಲ್ಲ. ಆದರೆ, ನೀವು ಡಿಫೆನ್ಸ್ ಮಾಡಬೇಕಾದರೆ ಮತ್ತೆ ಮುಂದೆ ಅಫೆನ್ಸಸ್ ಬೈ ಕಂಪನಿಸ್ ಹಾಕಿದಾಗ ಹೇಳುತ್ತೀರಿ. Provided he proves his innocence, he is not aware of it, he can be exempted. That means, he has to attend prosecution, stand trial at the time of defence. After undergoing the ordeal of attending the court for years together, ultimately you will defend yourselves. Is it your case? It will not serve the purpose. It is unwanted and it is going to create more trouble to the general public. "Any servant" means anybody can be hooked or booked. You will be giving wide power to the Forest Officer to make money and harassment of the public. This is what is going to happen by these two sections.

Then, "Offence by Companies etc." - Section 82B and 82A. What is said in the Companies Act, Factories Act? If I am correct, subject to correction, persons incharge under the companies Act means, Manager is the person who is responsible. There, law has been laid down. Matters have gone to Supreme Court and laws have been set at rest. So again you say every person of the

company - They don't even know who is Company Director and other things. ಮನೆಯಲ್ಲಿ ಹೆಂಡತಿ, ಮಕ್ಕಳು ಎಲ್ಲರನ್ನೂ ಸೇರಿಸಿ ಒಂದು ಕಂಪನಿ ಎಂದು ಮಾಡಿರುತ್ತಾರೆ. You must make it very clear as in other Sections of Factories Act, Companies Act as to who is liable and who is responsible. Otherwise, anybody could be held responsible. ನೀವು ಅಲ್ಲೊಂದು ಕಂಪನಿ ಮಾಡುವುದು, ಅನಂತರ, ಅವರನ್ನೆಲ್ಲಾ ಕೋರ್ಟಿಗೆ ಕರೆದುಕೊಂಡು ಬಂದು ನಿಲ್ಲಿಸುವುದಕ್ಕೆ ಮಾಡಿರುವಂಥ ಕಾನೂನು ಇದಾಗುತ್ತದೆ. ಉದಾಹರಣೆಗೆ ವಿಕ್ರಾಂತ್ ಟೈರ್ಸ್ ಪ್ರಕರಣದಲ್ಲಿ ನಾನು ನೋಡಿದ್ದೇನೆ. ದಸರಾ ಹಬ್ಬದ ಸಂದರ್ಭದಲ್ಲಿ ಸನ್ಮಾನ್ಯ ಒಡೆಯರ್‌ರವರು ಖುದ್ದಾಗಿ ಕೋರ್ಟಿಗೆ ಬಂದು ಹಾಜರಾಗಬೇಕಾಯಿತು, ಆ ಪ್ರಕರಣ ಏನಾಗಿದೆಯೆಂದು ಅವರಿಗೆ ಗೊತ್ತೇ ಇರಲಿಲ್ಲ. ಇಂತಹ ಪರಿಸ್ಥಿತಿ ಸಾಮಾನ್ಯ ಜನರಿಗೆ ಬರುವಂತಾದ್ದರ ಬಗ್ಗೆ ಸದರಿ ಆ್ಯಕ್ಟ್‌ನಲ್ಲಿ ತಂದಿದ್ದೀರಿ, ಇದು ನಿಜವಾಗಿಯೂ ಸರಿಯಿಲ್ಲ. ಕಂಪನಿಸ್ ಆ್ಯಕ್ಟ್‌ನಲ್ಲಿ ಡಿಫೈನ್ ಮಾಡಿ ನೀವು ಫಾರ್ಮೆಟ್ ಮಾಡಿ ಕಂಪನಿ ಆ್ಯಕ್ಟ್ ಎಂದು ಹೇಳಿ ನೋಟಿಫೈ ಮಾಡಿ ಅವರ ಹತ್ತಿರ ಸಿಗ್ನೇಚರ್ ತೆಗೆದುಕೊಂಡು whether he is the manager and person responsible for day to day administration as used in other cases as laid down by the Supreme Court also be incorporated here. ಸೂಟಬಲ್ ಅಮೆಂಡ್‌ಮೆಂಟ್ ನೀವು ಮಾಡದೇ ಇದ್ದರೆ all will be held responsible. ಇದನ್ನು ನೀವು ಗಮನಕ್ಕೆ ತೆಗೆದುಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ, ನೀವು ಮೊದಲೇ ಅಮೆಂಡ್‌ಮೆಂಟ್ ತರಬಹುದಾಗಿತ್ತು, ಇದನ್ನು ಗಮನದಲ್ಲಿಟ್ಟುಕೊಂಡು ತರುತ್ತೀರೆಂದು ತಿಳಿದಿದ್ದೇನೆ. Company means any body corporate and include a firm or other association of individuals. ಆದರೆ ಅಸೋಸಿಯೇಶನ್ ಆಫ್ ಇಂಡಿವಿಜುವಲ್ಸ್ ಎಂದಾಗ ಟ್ರಸ್ಟ್ ಬರುತ್ತದೆಯೇ? Public Trust or Private Trust, would it come into the picture? ಅದರಲ್ಲಿ ಅಸೋಸಿಯೇಶನ್ ಆಫ್ ಇಂಡಿವಿಜ್ಯುಯಲ್ಸ್ ಎಂದಾಗ ಇದು ಬರುತ್ತದೆಂದು ಹೇಳುತ್ತೀರೋ ಏಕೆಂದರೆ, ಕಂಪನಿ ಎಂದಾಗ any body corporate and includes a firm or other association of individuals. Do you mean to say public trsut also comes within that? ಅಸೋಸಿಯೇಷನ್ ಆಫ್ ಇಂಡಿವಿಜ್ಯುಯಲ್ಸ್ ಆಗುವುದಿಲ್ಲ. They are body registered under the Trust Act. ಆದುದರಿಂದ, ಬಾಡಿ ಅಸೋಸಿಯೇಷನ್ ಆಗುವುದಿಲ್ಲ. ಇವರು ರಂಗೋಲಿ ಕೆಳಗೆ ತೂರುವುದಕ್ಕೆ ಹೋಗಿ ಪಬ್ಲಿಕ್ ಟ್ರಸ್ಟ್ ಮಾಡಿಕೊಂಡು ಅದರ ಕೆಳಗೆ ಮಾಡಲು ಹೋಗುತ್ತಾರೆ. Please amplify this and bring a definition clause. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಇಲ್ಲಿಯೂ ಕೂಡ ಪಾರ್ಟನರ್ ಇನ್ ದಿ ಫರ್ಮ್ ಎಂದಾಗ ಪಾರ್ಟನರ್‌ಶಿಫ್ ಆ್ಯಕ್ಟ್ ಪ್ರಕಾರ whether it is a registered firm or unregistered firm. if it is a registered firm, any one of the partner or if it is a unregistered firm all partner will be liable. ಇಲ್ಲಿ ನೀವು ಏನು ಮಾಡಿದ್ದೀರೆಂದರೆ ವೇಗ ಆಗಿ ಎನಿ ಪಾರ್ಟನರ್ ಎಂದು ಹೇಳಿದ್ದೀರಿ; ಇದರಿಂದ ಕೂಡ you must clearly say if it is a registered firm any one partner, or it is

unregistered firm all partners will be liable. You must clearly define as per the Partnership Act. ಪಾರ್ಟನರ್ ಶಿಫ್ ಆ್ಯಕ್ಟ್‌ನಲ್ಲಿ ಡಿಫರ್ ಆಗುತ್ತದೆ. ರೂಲ್ಸ್‌ನಲ್ಲಿ ಬರುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸದಸ್ಯರಾದ ಪ್ರಮೀಳಾ ನೇಸರ್ಗಿಯವರು ಹೇಳುತ್ತಿರುವುದೇನೆಂದರೆ, ಬಹುಶ: ಅರಣ್ಯ ಸಚಿವರು ಮಾಡುತ್ತಿರುವ ತಿದ್ದುಪಡಿಗಳನ್ನೆಲ್ಲಾ ನಾಳೆ ಯಾರಾದರೂ ಕೋರ್ಟಿಗೆ ತೆಗೆದುಕೊಂಡು ಹೋದರೆ ಇದು ಕೋರ್ಟಿನಲ್ಲಿ ನಿಲ್ಲುವುದಿಲ್ಲ, ಜ್ಯುಡಿಷಿಯಲ್ ಸ್ಕ್ರೂಟಿನಿ ಆಗುವುದಿಲ್ಲ ಕೆಲವು ಸಲ ಹೆರಾಸ್‌ಮೆಂಟ್ ಆಗುತ್ತದೆಂದು ತಿಳಿಸುತ್ತಿದ್ದಾರೆ. ಜ್ಯುಡಿಷಿಯಲ್ ಸ್ಕ್ರೂಟಿನಿಗೆ ಯಾರಾದರೂ ತೆಗೆದುಕೊಂಡು ಹೋದಾಗ Forest Minister and myself together will certainly take the services of Smt. Pramila Nesargi to see that we succeed in the court.

ಶ್ರೀಮತಿ ಪ್ರಮೀಳಾ ನೇಸರ್ಗಿ : ವೇಗ್ ಆಗಿ ಯಾವುದೇ ಕಾನೂನನ್ನು ಇಡತಕ್ಕದ್ದಲ್ಲ.

ಶ್ರೀ ಡಿ. ಮಂಜುನಾಥ್: ಮತ್ತೆ ತಿದ್ದುಪಡಿ ತರಬಾರದೆಂದೇನೂ ಇಲ್ಲ. ತರೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕಂಪನಿಗಳಿಗೆ ಸಂಬಂಧಿಸಿದಂತೆ ನಾನು ಬಹಳಷ್ಟು ಪ್ರಕರಣಗಳಲ್ಲಿ ನೋಡಿದ್ದೇನೆ, ಹೆಣ್ಣು ಮಕ್ಕಳನ್ನು ಕಂಪನಿಗೆ ಡೈರೆಕ್ಟರ್ ಆಗಿ ನಾಮಕಾವಸ್ಥೆಗೆ ನೇಮಕ ಮಾಡುತ್ತಾರೆ. ಈ ರೀತಿ ತುಂಬಾ ಜನರನ್ನು ನೇಮಕ ಮಾಡಿದ್ದಾರೆ. ಕಂಪನಿ ಕೇಸ್ ಪ್ರಾಸಿಕ್ಯೂಷನ್‌ಗೆ ಬಂದಾಗ ನೇಮಕ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಹೆಣ್ಣುಮಕ್ಕಳನ್ನು ಕಂಪನಿಗಳಿಗೆ ನಾಮಕಾವಸ್ಥೆಗಾಗಿ ಏಕೆ ನೇಮಕ ಮಾಡುತ್ತಾರೆ? ಏದನ್ನು ಪ್ರಮೀಳಾ ನೇಸರ್ಗಿ ಹೇಳಬೇಕು. ನೀವು ಹೆಣ್ಣುಮಕ್ಕಳ ಪರವಾಗಿ ಹೋರಾಟ ಮಾಡತಕ್ಕಂಥವರು, ಸುಮ್ಮನೆ ಈ ರೀತಿ ಹೇಳಿದರೆ ಹೇಗೆ?

ಶ್ರೀಮತಿ ಪ್ರಮೀಳಾ ನೇಸರ್ಗಿ: ನಾಲಾಯಕ್ ಗಂಡುಗಳು ಈ ರೀತಿ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಇಲ್ಲ, ನಾಲಾಯಕ್ ಗಂಡುಗಳೆಂದು ಹೇಳಿರುವುದನ್ನು ಅವರು ಹಿಂತೆಗೆದುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ. : ನಾಲಾಯಕ್ ಗಂಡುಗಳಲ್ಲ, ಅವರ ಸ್ವಂತ ಲಾಭಕ್ಕೋಸ್ಕರ ಹೆಣ್ಣುಮಕ್ಕಳನ್ನು ಮುಂದಿಟ್ಟು ವ್ಯಾಪಾರ ಮಾಡುತ್ತಾರೆ.

ಶ್ರೀ ಡಿ. ಮಂಜುನಾಥ್: ಇದರಲ್ಲಿ ಹೆಣ್ಣುಮಕ್ಕಳನ್ನೂ ನೇಮಕ ಮಾಡಬೇಕೆಂದಿದೆ. ಅವರನ್ನೂ ಮಾಡುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕಾಂಟೆಕ್ಸ್ಟ್ ಸ್ವಲ್ಪ ಕಷ್ಟವಾಯಿತು, ಅದಕ್ಕೋಸ್ಕರ ಹೇಳಿದೆ, ಇವೆಲ್ಲಾ ಕಾನ್‌ಸಿಕ್ವೆನ್‌ಷಿಯಲ್. ಫಾರೆಸ್ಟ್ ಪ್ರಿಸರ್ವೇಷನ್ ಆಫ್ ಟ್ರೀಸ್ ಆ್ಯಕ್ಟ್‌ನಲ್ಲಿ ಮೊದಲು ಏನು ತಂದಿದ್ದರು, ಕೊನೆಗೆ Section 8A - Cancellation or suspension of permission granted

under Section-8. It read thus : ``The Tree Officer may cancel or suspend the permission granted under section 8 on any of the grounds specified below, after giving an opportunity of being heard to the grantee and after recording reasons therefore ..." Have you made any provision for appeal?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸೆಕ್ಷನ್ 14ರಲ್ಲಿ 'ಅಪೀಲೂ' (1) 8,9 ಮತ್ತು 10ನೇ ಪ್ರಕರಣಗಳ ಮೇರೆಗೆ ಮರಗಳ ಅಧಿಕಾರಿಯು ಮಾಡಿದ ಆದೇಶದ ಮೇಲೆ, ಮರಗಳ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸತಕ್ಕದ್ದು ಎಂದು ಇದೆ.

SMT PRAMILA NESARGI : In section 14 correspondingly 8A should have been included 8(ಎ)ನಲ್ಲಿ ಇನ್‌ಕ್ಲೂಡ್ ಆಗಬೇಕಾಗಿತ್ತು. ಇಲ್ಲದಿದ್ದರೆ ಇವರು ಏನೇ ಮಾಡಿದರೂ ಅವರೇ ಸರ್ವಾಧಿಕಾರಿಯಾಗುತ್ತಾರೆ. ಆಗ ಅಪೀಲ್‌ಗೆ ಪ್ರಾವಿಷನ್ ಇರುವುದಿಲ್ಲ, ಬರೀ ಸೆಕ್ಷನ್ 8,9 ಮತ್ತು 10 ಉಳಿಯುತ್ತದೆ. ಕಾನ್‌ಸಿಕ್ವೆಂಟಲಿ ಸೆಕ್ಷನ್ 14 ರಲ್ಲಿ 8(ಎ) ಇನ್‌ಕ್ಲೂಡ್ ಆಗಬೇಕಾಗುತ್ತದೆ.

SRI M.C. NANAIAH : Sub -Clause 7 you read. In section 14, in sub-section (1) , after the figure '8' the figure and letter '8A' shall be inserted. Are you satisfied now? ಸೆಕ್ಷನ್ 14 ಕ್ಕೆ ಅಮೆಂಡ್‌ಮೆಂಟ್ ತಂದಿದ್ದೇವೆ, ಅದು ಯಾವುದೆಂದು ಓದಿ, ಸೆಕ್ಷನ್ 14 ರಲ್ಲಿ 8(ಎ) ಅನ್ನು ಕೂಡ ಇನ್‌ಕ್ಲೂಡ್ ಮಾಡಲಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸೆಕ್ಷನ್ 14ರಲ್ಲಿ 8(ಎ) ಅನ್ನು ಇನ್‌ಕ್ಲೂಡ್ ಮಾಡಿದ್ದೇವೆಂದು ಹೇಳಿದ್ದೀರಿ. ಅನಂತರ in sub -clause (8) in Section 21, in clause (a) , for the words, "not exceeding five thousand rupees" the words, "equalivalent to twenty five percent of the value of the property involved in the offence shall be substituted. ಎಂದರೆ ಇದು ಯಾವುದು? 'will it stand'? ಎಂಬುದನ್ನು ಯೋಚನೆ ಮಾಡಬೇಕು. ಯಾರೋ ಒಬ್ಬ ಮರವನ್ನು ಕಟ್ ಮಾಡಿ ಹೋಗಿರುತ್ತಾನೆ. ಇನ್‌ವೇರಿಯಬಲಿ ನಿಮ್ಮ ಫಾರೆಸ್ಟ್ ಆಫೀಸರ್‌ಗಳೇ ಅಲ್ಲಿ ಮರವನ್ನು ಕಟ್ ಮಾಡಿ ಹಾಕಿರುತ್ತಾರೆ. ಯಾರಾದರೂ ಕೇವಲ ಒಂದು ಮರ ಕಡಿದು ಹಾಕಿದ್ದರೂ ಕೂಡ ಆತ ಆ ಸ್ವತ್ತಿನ ಮೌಲ್ಯದ ಶೇಕಡ ಇಪ್ಪತ್ತೈದರಷ್ಟು ಸಮನಾದ ಮೊತ್ತವನ್ನು ಸಂದಾಯ ಮಾಡಬೇಕೆಂದರೆ ಅದು ಬಹಳ ಕಠಿಣ ದಂಡವಾಗುತ್ತದೆ. I just want you to examine how it works out harshly for the public. ಅದೇ ರೀತಿ 'ಕಂಪನಿಗಳಿಂದ ಅಪರಾಧಗಳು' ಎಂಬ ಶೀರ್ಷಿಕೆ ಅಡಿಯಲ್ಲೂ ಕೂಡ ನೀವು ಸೂಕ್ತವಾದ ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. "who is the person incharge of the company or the person who is in charge of the day-to-day transactions only is liable and not the Company Manager, the Secretary or the other person.

SRI M.C. NANAIAH : We had made all the provisions in the very amendment itself in the respect of the persons other than the Manging Directors or the Directors of the Company. Other persons involved. There is a proviso. Kindly read the Proviso, under Section 8A. What does it read? "provided that nothing contained in this sub-section shall render any such person liable to any punishment if he proves that the offence was committed without his knowledge or that he exercised all due diligence to prevent the commission of such offence." So they have made this provision. Ultimately all these things relate to prevention of forest offences. Our concern you must bear in mind. Forest offences are on the increase. We need have to protect it. And such of the persons who are involved in forest offences, shall be punished. So we are trying to enlarge the scope now.

SMT. PRAMILA NESARGI : There will be more litigation.

ಶ್ರೀ ಎಂ. ಸಿ. ನಾಣಯ್ಯ : ಇದರಿಂದಾಗಿ ಹೆಚ್ಚು ಜನ ಕೋರ್ಟಿಗೆ ಬರುವಂತಾದರೆ ವಕೀಲರಾದ ನಿಮಗೇ ಅನುಕೂಲ ಅಲ್ಲವೇ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಆಗ ಕಾನೂನು ಇಲಾಖೆಗೂ ಕೂಡ ಇನ್ನೂ ಹೆಚ್ಚು ಜನ ಬೇಕಾಗುತ್ತದೆ. Company Act comes under prosecution. There they will prosecute them and then they will have to give the bail.

SRI KAGODU THIMMAPPA : Under the Companies Act or the partnership Act, there should be a person who should be representing the Company. That person alone can be prosecuted, not all the partners and the share holders.

SMT. PRAMILA NESARGI : In the Supreme Court, the law has been set at rest now. They have clearly held that it is only the person concerned.

+ ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಉಪಾಧ್ಯಕ್ಷರೇ, ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಇದು ಭಾರೀ ಹಳೆಯ ಕಾನೂನಾಗಿತ್ತು. ಇದನ್ನು ಬದಲಾವಣೆ ಮಾಡತಕ್ಕಂತಹ ಒಂದು ಪ್ರಯತ್ನವನ್ನು ತಾವು ಮಾಡಿದ್ದೀರಿ, ಅದನ್ನು ನಾನು ಸ್ವಾಗತಿಸುತ್ತಿದ್ದೇನೆ. ಮಸೂದೆಯಲ್ಲಿ ಕಾನೂನಿನ ತೊಡಕುಗಳು ಏನಿವೆ ಎಂಬುದನ್ನು ವಕೀಲರಾದ ಶ್ರೀಮತಿ ಪ್ರಮೀಳಾರವರು ಆಗಲೇ ಹೇಳಿದ್ದಾರೆ. ನಾನು ಕಾನೂನಿನ ಅಂಶಗಳ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಪ್ರಾಕ್ಟಿಕಲ್ ತೊಡಕುಗಳು ಏನಿವೆ ಎಂಬ ಬಗ್ಗೆ ಮಾತ್ರ 2-3 ವಿಚಾರಗಳನ್ನು ನಾನು ತಮ್ಮ ಮುಂದೆ ಇಡಲು ಇಚ್ಛೆ

ಪಡುತ್ತೇನೆ. ಬಹುಶಃ ನಿಮ್ಮ ಇವತ್ತಿನ ಈ ವಿಚಾರದಲ್ಲಿ ಬದಲಾವಣೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಕಾಫಿ ತೋಟದಲ್ಲಿ ಒಂದು ತೊಂದರೆ ಇತ್ತು. ಪರ್ಟಿಕ್ಯುಲರಿ ಮಲೆನಾಡು ಪ್ರದೇಶದಲ್ಲಿ ನಾವು ಕಾಫಿ ಮತ್ತು ಎಲಕ್ಕಿ ಎರಡೂ ಬೆಳೆಗಳನ್ನು ಬೆಳೆಯುತ್ತೇನೆ. ಕಾಫಿ ತೋಟದಲ್ಲಿ ಮರ ಕಡಿಯಬೇಕಾದರೆ ಒಂದು ರೀತಿಯ ಕಾನೂನು ಇದೆ. ಏಲಕ್ಕಿ ತೋಟದಲ್ಲಿ ಮರ ಕಡಿಯಬೇಕಾದರೆ ಮತ್ತೊಂದು ರೀತಿಯ ಕಾನೂನು ಇದೆ. ಏಲಕ್ಕಿ ತೋಟದಲ್ಲಿ ಮರ ಕಡಿಯಬೇಕಾದರೆ 2 ಮೀಟರ್ ಮೇಲ್ಪಟ್ಟು ಮತ್ತು ಕಾಫಿ ತೋಟದಲ್ಲಿ ಒಂದು ಮೀಟರ್ ಮೇಲ್ಪಟ್ಟು ಮರ ಕಡಿಯುವ ಕಾನೂನು ಇದೆ. ಒಂದೇ ಸರ್ವೆ ನಂಬರ್‌ನಲ್ಲಿ ಎರಡು ರೀತಿಯ ಬೆಳೆ ಕಡಿಯಲು ಎರಡು ಬೇರೆ ಬೇರೆ ರೀತಿಯ ಕಾನೂನುಗಳು ಇವೆ. ಯಾವುದೇ ಕಾನೂನು ಮಾಡಬೇಕಾದರೆ, ಅದು ಸರಳವಾಗಿರಬೇಕು. ಕಾನೂನು ಸರಳವಾಗದಿದ್ದ ಕಾರಣ ಈ ಮರ ಹೆಚ್ಚಿನ ಭಾಗದಲ್ಲಿ ಕಳ್ಳತನವಾಗಲಿಕ್ಕೆ ವ್ಯವಸ್ಥೆಯಾಯಿತು. ಬಹುಶಃ ತಾವು ಈ ಕಾನೂನಿನಲ್ಲಿ ಇದನ್ನು ತೆಗೆದುಕೊಂಡು ಬಂದಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಮರ ಕಡಿಯುವ ವಿಚಾರದಲ್ಲಿ ನಮ್ಮ ರಾಜ್ಯದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಕಾನೂನಿನಲ್ಲಿ ವ್ಯತ್ಯಾಸ ಇದೆ. ಕೊಡಗು ಜಿಲ್ಲೆಗೆ ಒಂದು ರೀತಿಯಾದ ಕಾನೂನು ಇದ್ದರೆ, ಬೇರೆ ಜಿಲ್ಲೆಗಳಿಗೆ ಬೇರೆ ಬೇರೆ ರೀತಿಯ ಕಾನೂನುಗಳಿವೆ. ಒಂದೇ ಕಾನೂನಿನ ಅಡಿಯಲ್ಲಿ ಇದನ್ನೆಲ್ಲಾ ತರಲಿಕ್ಕೆ ಸಾಧ್ಯವಿದೆಯೇ ಎನ್ನುವಂತಹ ಒಂದು ಪ್ರಯತ್ನ ಇದರಲ್ಲಿ ಆಗಬೇಕು. ತಾವು ಒಂದು ಕಾನೂನು ಮಾಡಿದ್ದೀರಿ. ತನ್ನ ಸ್ವಂತ ಜಾಗದಲ್ಲಿ 150-200 ಘನ ಅಡಿ ಮರವನ್ನು ಕಡಿದು ಉಪಯೋಗ ಮಾಡಿಕೊಳ್ಳಲಿಕ್ಕೆ ತಾವು ಕಾನೂನಿನಲ್ಲಿ ಅವಕಾಶ ಮಾಡಿದ್ದೀರಿ. ಆದರೆ ಅದರ ಒಂದು ಪರ್ಮಿಟ್ ಪಡೆದುಕೊಳ್ಳಬೇಕಾದರೆ ಸಾಕಷ್ಟು ಪ್ರಯತ್ನ ಪಡಬೇಕಾಗುತ್ತದೆ. ಕಾನೂನಿನಲ್ಲಿರತಕ್ಕ ತೊಡಕುಗಳನ್ನು ನಿವಾರಿಸಿ ಅದನ್ನು ಸರಳೀಕರಣ ಮಾಡಿದರೆ ಬಹುಶಃ ಈ ಕೆಲಸ ಬಹಳ ಸುಲಭವಾಗಿ ಆಗುತ್ತದೆ. ಸರ್ಕಾರಕ್ಕೂ ಕೂಡ ಅದರಿಂದ ಸಾಕಷ್ಟು ಹಣ ಬರಲಿಕ್ಕೆ ಅವಕಾಶ ಇದೆ. ಕಾನೂನಿನಲ್ಲಿ ಭಾರೀ ತೊಡಕಿರುವುದರಿಂದ ಕಳ್ಳತನ ಜಾಸ್ತಿಯಾಗುತ್ತಿದೆ. ಪರ್ಮಿಟ್ ಪಡೆಯಲು ಕೊನೇ ಪಕ್ಷ 8-10 ತಿಂಗಳು ಓಡಾಡಬೇಕಾಗುತ್ತದೆ. ನನ್ನ ಸ್ವಂತ ಜಾಗದಲ್ಲಿರುವ ಮರ ಕಡಿದು ಅದಕ್ಕೆ ಸಂಬಂಧಪಟ್ಟವರಿಂದ ಸೆಲ್ಲಿಂಗ್ ಪರ್ಮಿಟ್ ಪಡೆದುಕೊಳ್ಳಬೇಕಾದರೆ ಶಾಸಕನಾದ ನನಗೇ 9 ತಿಂಗಳು ಬೇಕಾಯಿತು. ಆದರೆ ಸಾಮಾನ್ಯ ಜನಕ್ಕೆ ಸುಲಭವಾಗಿ ಪರ್ಮಿಟ್ ಪಡೆಯಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ರಾತ್ರೋರಾತ್ರಿ ಮರ ಕಡಿಯುತ್ತಾರೆ. ಈಗಂತೂ ಮರ ಕಡಿಯುವ ವಿಚಾರದಲ್ಲಿ ಭಾರೀ ಸುಧಾರಿಸಿದ ಪದ್ಧತಿಗಳು ಬಂದಿವೆ. ರಾತ್ರಿ ವೇಳೆಯಲ್ಲಿ 'ಬೆಳಿಗ್ಗೆ ಅಲ್ಲಿ ಮರ ಇರಲೇ ಇಲ್ಲ' ಎನ್ನುವಷ್ಟರ ಮಟ್ಟಿಗೆ ಮರ ತೆಗೆಯುವಂತಹ ವ್ಯವಸ್ಥೆ ಇದೆ. ಆದುದರಿಂದ ಕಾನೂನನ್ನು ಸ್ವಲ್ಪ ಸರಳ ಮಾಡಬೇಕು. ಮತ್ತೊಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆ ಪಡುತ್ತೇನೆ. ಹಿಂದೆ ಗಂಧದ ಮರ ಎಲ್ಲಿದ್ದರೂ ಅದು ಸರ್ಕಾರಿ ಸ್ವತ್ತಾಗಿತ್ತು. ಅದನ್ನು ಬೇರೆ ಯಾರೂ ಮುಟ್ಟಲಿಕ್ಕೆ ಅವಕಾಶ ಇರಲಿಲ್ಲ. ನನ್ನ ಸ್ವಂತ ಜಾಗದಲ್ಲಿ ಗಂಧದ ಮರವಿದ್ದರೂ ಅದು ಸರ್ಕಾರದ ಸ್ವತ್ತಾಗಿತ್ತು. ನಮ್ಮ ಸ್ವಂತ ಜಮೀನಿನಲ್ಲಿರುವ ಗಂಧದ ಮರಕ್ಕೆ ಏನಾದರೂ ಅಪಾಯವಾಗಿದ್ದರೆ ನಮ್ಮ ಮೇಲೆಯೇ ಕ್ರಮ ತೆಗೆದುಕೊಳ್ಳುವಂತಹ ವ್ಯವಸ್ಥೆ ಇತ್ತು. ಇಂತಹ ಕಾನೂನಿನಿಂದಾಗಿ ಜನರು ಗಂಧದ ಮರ ಸಣ್ಣ ಸಸಿ ಇದ್ದಾಗಲೇ ಕಡಿದು ಹಾಕಿ ಬಿಡುತ್ತಿದ್ದರು. ಅದನ್ನು ತಾವು ಈಗ ಬದಲಾವಣೆ

ಮಾಡಿದಿರಿ. ಅದನ್ನು ತಾವು ಬದಲಾವಣೆ ಮಾಡಿ ಗಂಧದ ಮರದಲ್ಲಿ ಸ್ವಲ್ಪ ಭಾಗ ಜಮೀನ್‌ದಾರನಿಗೂ ಸಿಗುತ್ತದೆ ಎನ್ನುವಂತಹ ವ್ಯವಸ್ಥೆ ಮಾಡಿದಿರಿ. ಹಾಗಾಗಿ ಗಂಧದ ಮರ ಸ್ವಲ್ಪ ಉಳಿಯುವಂತಾಯಿತು. ಗಂಧದ ಮರವನ್ನು ಜನ ಕಾಪಾಡಲಿಕ್ಕೆ ಶುರು ಮಾಡಿದರು. ಇಲ್ಲದಿದ್ದರೆ ಪೂರ್ತಿ ಕಳ್ಳರ ಪಾಲಾಗುತ್ತಿತ್ತು. ಇವತ್ತು ಅದೇ ಪರಿಸ್ಥಿತಿ ಬೀಟೆ ಮರಕ್ಕೆ ಬಂದಿದೆ. ಇವತ್ತು ಬೀಟೆ ಮರ ರಾತ್ರೋರಾತ್ರಿ ಕಳ್ಳತನವಾಗುತ್ತಿದೆ. ಎಷ್ಟೇ ದೊಡ್ಡ ಮರವಿದ್ದರೂ ಕೂಡ ನಮ್ಮ ಜಾಗದಲ್ಲಿ ಬೀಟೆ ಮರ ಕಳ್ಳತನವಾಗುತ್ತಿದೆ. ನಾವು ಏನೂ ಮಾಡಲಿಕ್ಕೆ ಆಗುವುದಿಲ್ಲ. ಕಾರಣವೇನೆಂದರೆ, ಬೀಟೆ ಮರ ಸರ್ಕಾರಿ ಸ್ವತ್ತಾಗಿದೆ. ಇವತ್ತು ಬೀಟೆ ಮರಕ್ಕೂ ಕೂಡ ಗಂಧದ ಮರದ ರೀತಿಯಲ್ಲಿ ತಾವು ಏನಾದರೂ ಒಂದು ಅವಕಾಶ ತಂದು ಎಷ್ಟು ಬೀಟೆ ಮರಗಳಿವೆ ಎಂಬುದನ್ನು ನೋಡಿ ಅದರಲ್ಲಿ ಅದರ ಮಾಲೀಕನಿಗೆ ಇಷ್ಟು ಭಾಗ ಸಲ್ಲುತ್ತದೆ ಎನ್ನುವುದನ್ನು ಮಾಡಿದರೆ, ಇರತಕ್ಕಂತಹ ಬೀಟೆ ಮರಗಳನ್ನು ಕಡಿದು ತಾವೇ ತೆಗೆದುಕೊಂಡು ಹೋಗಿ ಮಾಲೀಕನಿಗೆ ಹಣ ಕೊಡತಕ್ಕ ವ್ಯವಸ್ಥೆಯಾಗುತ್ತದೆ. ಗಂಧದ ಮರದ ವಿಚಾರದಲ್ಲಿ ತೆಗೆದುಕೊಂಡ ನಿರ್ಣಯವನ್ನು ಬೀಟೆ ಮರದ ವಿಚಾರದಲ್ಲೂ ಸರ್ಕಾರ ತೆಗೆದುಕೊಂಡರೆ ಬಹುಶಃ ಬೀಟೆ ಮರಗಳು ಉಳಿಯುವುದಕ್ಕೆ ಅವಕಾಶವಾಗುತ್ತದೆ ಮತ್ತು ಸರ್ಕಾರಕ್ಕೂ ಹಣ ಬರುತ್ತದೆ. ಇದರ ಬಗ್ಗೆ ಸರ್ಕಾರ ಸ್ವಲ್ಪ ಹೆಚ್ಚಿನ ಗಮನ ಇಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ತಾವು ಸಮಿತಿಯ ರಚನೆಯ ಬಗ್ಗೆ ಮಸೂದೆಯನ್ನು ಹೇಳಿದ್ದೀರಿ. ಗ್ರಾಮ ಗ್ರಾಮದಲ್ಲಿ ಸಮಿತಿ ರಚನೆ ಮಾಡತಕ್ಕಂತಹ ಸಂದರ್ಭದಲ್ಲಿ ರಾಜಕೀಯ ಪ್ರವೇಶವಾಗದ ರೀತಿಯಲ್ಲಿ ಅದರ ವ್ಯವಸ್ಥೆಯಾಗಬೇಕು. ಯಾರು ನಿಜವಾಗಿ ಯೋಗ್ಯನಿರುತ್ತಾನೋ, ಪರಿಪರ ಪ್ರೇಮಿಯಾಗಿರುತ್ತಾನೋ, ಕಾಡಿನ ಬಗ್ಗೆ ಚಿಂತನೆ ಮಾಡತಕ್ಕವನಾಗಿರುತ್ತಾನೋ ಅಂತಹವನ್ನು ಸಮಿತಿಗೆ ನೇಮಿಸಬೇಕು. ಇಂತಹವರು ಸಾಕಷ್ಟು ಜನ ಇವತ್ತು ಗ್ರಾಮದಲ್ಲಿ ಸಿಗುತ್ತಾರೆ. ಹಳ್ಳಿಗಳಲ್ಲಿ ಇದರ ಬಗ್ಗೆ ಯೋಚನೆ ಮಾಡತಕ್ಕಂತಹ ಜನ ಸಾಕಷ್ಟು ಇದ್ದಾರೆ. ಇಂತಹವರನ್ನು ಸಮಿತಿಗೆ ನೇಮಕ ಮಾಡುವುದರಿಂದ ಗುರುತಿಸಲಿಕ್ಕೂ ಬಹಳ ಸುಲಭವಾಗುತ್ತದೆ. ಅದು ಬಿಟ್ಟು ನೀವು ಚುನಾವಣೆ ವ್ಯವಸ್ಥೆ, ಅದಾದ ನಂತರ ನಾಮಿನೇಷನ್ ವ್ಯವಸ್ಥೆ ಮಾಡುವಂತಿದ್ದರೆ ಪುನಃ ಇದರಲ್ಲಿ ರಾಜಕೀಯ ಪ್ರವೇಶವಾಗುತ್ತದೆ. ಆ ಸಮಿತಿ ರಚನೆಯ ಉದ್ದೇಶವೇನಿದೆ ಅದು ಸಫಲವಾಗುವುದಿಲ್ಲ. ಆದುದರಿಂದ ಸಮಿತಿ ರಚನೆ ಬಗ್ಗೆ ತಾವು ಮತ್ತೊಮ್ಮೆ ದೀರ್ಘಾಲೋಚನೆ ಮಾಡಿ, ಯಾವ ರೀತಿ ಸಮಿತಿ ರಚನೆ ಮಾಡಿದರೆ ಸೂಕ್ತ ಎಂಬ ಬಗ್ಗೆ ಮಾರ್ಗವನ್ನು ತಾವು ಕಂಡು ಹಿಡಿಯಬೇಕು. ಆ ಒಂದು ವಿಚಾರವನ್ನು ನಾನು ತಮ್ಮ ಮುಂದಿಡುತ್ತಿದ್ದೇನೆ. ತಮಗೆ ಹೇಳಬೇಕಾದ ಇನ್ನೊಂದು ಅಂಶವೆಂದರೆ, ಕೊನೆಗಾದರೂ ಮರವೆಲ್ಲಾ ಪೂರ್ತಿ ಹೋದ ಮೇಲೆ, ಮರ ಉಳಿಸತಕ್ಕಂತಹ ಒಂದು ಪ್ರಯತ್ನ ತಾವೇನು ಮಾಡಿದ್ದೀರಿ, ಇದು ಸ್ವಾಗತಾರ್ಹವಾದುದು. ಆದರೆ ಕಾನೂನಿನಲ್ಲಿ ಕೆಲವು ತೊಡಕುಗಳಿವೆ, ಅದನ್ನು ಸರಳೀಕರಣ ಮಾಡಿ. ನಾನು ಆಗಲೇ ಹೇಳಿದೆ, ಮಾಫಿ ಪಾಸ್ ನೀವೇನು ಕೊಡುತ್ತೀರೋ, ಅದು ನಮ್ಮ ಸ್ಥಳದ ರೇಂಜ್ ಆಫೀಸರ್‌ನಿಂದ ಹಿಡಿದು ಬೆಂಗಳೂರಿನಲ್ಲಿರುವ ಚೀಫ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್‌ರವರೆಗೆ ಬರುತ್ತದೆ. ಮತ್ತೆ ಪುನಃ ಹಾಗೆಯೇ ಹೋಗುತ್ತದೆ. ಹಲವಾರು ಕಾರಣಗಳಿಂದ ಈ ತೊಡಕುಗಳಿವೆ. ಮರ ನನ್ನದು, ಜಾಗ ನನ್ನದು, ಇಷ್ಟು ಕನ್‌ಫರ್ಮ್ ಆದರೆ ಡಿಸ್ಟ್ರಿಕ್ಟ್ ಆಫೀಸ್‌ನಲ್ಲಿ ಇರುವವರೇ ಅದಕ್ಕೆ ವ್ಯವಸ್ಥೆ ಮಾಡಬಹುದು. ಏತಕ್ಕೋಸ್ಕರ ಇಷ್ಟೊಂದು ದುಡ್ಡು ವೆಚ್ಚ

ಮಾಡುವುದು, 4-6 ತಿಂಗಳು ತಿರುಗತಕ್ಕ ವ್ಯವಸ್ಥೆ ಮಾಡಿದ್ದೀರೋ, ನನಗೆ ಗೊತ್ತಿಲ್ಲ. ಈ ತರಹ ಕೆಲವು ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಹಂತ ಹಂತವಾಗಿ ಅಧಿಕಾರಿಗಳಿಗೆ ಅಧಿಕಾರ ಕೊಟ್ಟರೂ ಕೂಡ ಸ್ವಲ್ಪ ಸುಲಭವಾಗಬಹುದೆಂದು ಈ ಸಂದರ್ಭದಲ್ಲಿ ಹೇಳಿ, ತಾವು ತೆಗೆದುಕೊಂಡು ಬಂದಿರುವ ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಕಾನೂನಿನ ತೊಡಕುಗಳ ಬಗ್ಗೆ ಶ್ರೀಮತಿ ಪ್ರಮೀಳಾರವರು ಹೇಳಿದ್ದಾರೆ, ಅದರ ಬಗ್ಗೆ ತಾವೇನು ಗಮನ ಹರಿಸುತ್ತೀರೋ ಹರಿಸಿ. ಈ ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಏನಿದೆ ಅದರ ಬಗ್ಗೆ ತಾವು ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆ ಮೇಲೆ ನಾವೇನು ಇಲ್ಲಿ ಸಮಗ್ರ ಚರ್ಚೆ ನಡೆಸುತ್ತಿದ್ದೇವೆಯೋ, ಈ ಚರ್ಚೆ ಅಕ್ರಮವೆಂದು ನನಗನಿಸುತ್ತದೆ. ಸಾಮಾನ್ಯವಾಗಿ ಸದನದಲ್ಲಿ ಒಂದು ಮಸೂದೆಯನ್ನು ಮಂಡಿಸಬೇಕಾದರೆ ಸಂಬಂಧಪಟ್ಟ ಸಚಿವರು ಅದನ್ನು ಮಂಡಿಸಬೇಕು, ಇಲ್ಲದಿದ್ದರೆ ಅವರ ಪರವಾಗಿ ಬೇರೆ ಸಚಿವರು ಮಂಡಿಸುತ್ತಾರೆ. ಇದು ಇರತಕ್ಕ ಸಂಪ್ರದಾಯ. ಆದರೆ ಇವತ್ತು ಈ ಮಸೂದೆ 'ಗುರುಪಾದಪ್ಪ ನಾಗಮಾರಪಲ್ಲಿ, ಅರಣ್ಯ ಸಚಿವರು' ಎಂಬ ಹೆಸರಿನಲ್ಲಿ ಸದನದಲ್ಲಿ ಮಂಡನೆಯಾಗಿದೆ. ಈ ಸದನವೇನು ಅಯ್ಯಪ್ಪನ ಚಾವಡಿ ಕೆಟ್ಟು ಹೋಯಿತೇ? ಇದೇನಿದು ಹುಡುಗಾಟ, ಇದಕ್ಕೇನು ಬೆಲೆ ಬೇಡವೇ? ಶ್ರೀ ಮಂಜುನಾಥ್‌ರವರು ಅರಣ್ಯ ಸಚಿವರಾಗಿರುವಾಗ ನಮಗೆ ಒದಗಿಸಿರತಕ್ಕ ಮಸೂದೆಯ ಪ್ರತಿಯಲ್ಲಿ 'ಗುರುಪಾದಪ್ಪ ನಾಗಮಾರಪಲ್ಲಿ, ಅರಣ್ಯ ಸಚಿವರು' ಎಂದಿದೆ. ಇದೇನಿದು? ಅವರು ಯಾರು? ಇದು ನಿಜವಾಗಿ ಅಕ್ರಮ. ಈ ಮಸೂದೆಯನ್ನು ತಡೆಹಿಡಿಯಬೇಕೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು : ಅದು ಕೌನ್ಸಿಲ್‌ನಿಂದ ಪಾಸ್ ಆಗಿ ಬಂದಿದೆ. ಒಬ್ಬರು ಅರಣ್ಯ ಸಚಿವರು ಹೋದ ಮೇಲೆ ಮತ್ತೊಬ್ಬ ಅರಣ್ಯ ಸಚಿವರು ಬಂದಿದ್ದಾರೆ. ಇದರಲ್ಲೇನು ತಪ್ಪಿದೆ?

ಶ್ರೀ ವಾಟಾಳ್ ನಾಗರಾಜ್ : ಸುಮ್ಮನೆ ನಾವು ಈ ಸದನವನ್ನು ಅಯ್ಯಪ್ಪನ ಚೌಡಿ ತರಹ ಮಾಡಬಾರದು. ಮೂಲಭೂತವಾಗಿ ಈ ಮಸೂದೆಯಲ್ಲಿ ಸಂಬಂಧಪಟ್ಟ ಸಚಿವರು ಈಗಿರುವವರು ಯಾರಿದ್ದಾರೆ ಅವರ ಹೆಸರು ಮುದ್ರಣ ಮಾಡಬೇಕು. ನಾಗಮಾರಪಲ್ಲಿಯವರ ಹೆಸರು ಬರುವುದು ಅಲ್ಲ.

ಉಪಾಧ್ಯಕ್ಷರು : ಹೌಸ್ ಪ್ರಾಪರ್ಟಿ ಆಗಿರುವುದರಿಂದ ಅದನ್ನು ಬದಲಾವಣೆ ಮಾಡಿಕೊಳ್ಳಬಹುದು. ಇದರ ಬಗ್ಗೆ ಚರ್ಚೆ ಬೇಡ. ನಾವು ಬದಲಿ ಮಾಡಿಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಸದನದ ಸ್ವತ್ತಾಗಿರಬಹುದು, ಸದನದ ಸ್ವತ್ತಿನಲ್ಲಿ ಸಚಿವರು ಯಾರು? ಇಷ್ಟು ಲಘುವಾಗಿ ನೀವು ತೆಗೆದುಕೊಂಡರೆ....

ಉಪಾಧ್ಯಕ್ಷರು : ಲಘುವಾಗಿ ಏನಿದೆ.....

ಶ್ರೀ ವಾಟಾಳ್ ನಾಗರಾಜ್ : ಇದು ಪಾಪ ಪುಣ್ಯ ಅಲ್ಲ, ಪುರುಷಾರ್ಥ ಅಲ್ಲ, ನಾನು ಹೇಳತಕ್ಕಂಥದ್ದು ಈ ಮಸೂದೆ ಯಾರ ಹೆಸರಿನಲ್ಲಿ ಬರಬೇಕು, ಸಂಬಂಧಪಟ್ಟ ಅರಣ್ಯ ಸಚಿವರು ಇದ್ದಾರೆ, ನಾನು ನೋಡುತ್ತಿದ್ದೇನೆ, ಗುರುಪಾದಪ್ಪ ನಾಗಮಾರಪಲ್ಲಿ ಅವರ ಹೆಸರಿನಲ್ಲಿ ಚರ್ಚೆ ನಡೆಯುತ್ತಿದೆ, ಅವರು ಮಸೂದೆ ಮಂಡನೆ ಮಾಡಿದ್ದಾರೆ, ಇದು ನಿಜ. ತಾಂತ್ರಿಕವಾಗಿ ಇದು ಸಣ್ಣ ವಿಚಾರವಿರಬಹುದು, ಪ್ರಾಮಾಣಿಕವಾಗಿ ಹೇಳಬೇಕಾದರೆ, ಇದು ಯಾರ ಹೆಸರಿನಲ್ಲಿ ಮಂಡನೆಯಾಗಬೇಕು, ಅವರಿಲ್ಲದೆ ಇದ್ದರೆ ಈಗಿರತಕ್ಕಂತಹ ಸಂಪುಟ ದರ್ಜೆ ಸಚಿವರು ಮಂಡನೆ ಮಾಡಬೇಕು. ಅದು ಬಿಟ್ಟು ಇನ್ನೂ ನಾಗಮಾರಪಲ್ಲಿಯವರ ಹೆಸರಿನಲ್ಲೇ ಇರುವುದಾದರೆ, ನಮ್ಮ ಸರ್ಕಾರಕ್ಕೆ ಸಂಸದೀಯ ಸಚಿವರಿಗೆ ನಮ್ಮ ರಾಜ್ಯದ ಆಡಳಿತ ಏನು ಇದು, ನೀವು ಏನೋ ಹೇಳುವುದು ಸರಿಯಲ್ಲ.

ಶ್ರೀ ಎಂ. ಸಿ. ನಾಣಯ್ಯ : ಕಾನೂನು ಬಗ್ಗೆ ಹೇಳುವುದಾದರೆ, ಕಾನೂನು ಹೇಳುವ. ತಾಂತ್ರಿಕ ವಿಚಾರ ಎಂದರೆ ಇನ್ನೊಂದು. ಒಂದು ಸಲ ಒಂದು ಬಿಲ್ ನಾವು ಪೈಲೆಟ್ ಮಾಡಿದ ಮೇಲೆ ಈ ವಿಧೇಯಕ ಮೇಲ್ಮನೆಯಲ್ಲಿ ಮಂಡಿಸಿ, ಅಲ್ಲಿ ಅಂಗೀಕಾರ ದೊರೆತಾದ ಮೇಲೆ ಈ ಮನೆಗೆ ಬಂತು. ಈ ಮನೆಗೆ ಬಂದ ಮೇಲೆ....

ಶ್ರೀ ವಾಟಾಳ್ ನಾಗರಾಜ್ : ನಾನು ನೇರವಾಗಿ ಮಂಜುನಾಥ್‌ರವರಿಗೆ ಕೇಳುತ್ತೇನೆ, ಇದು ನಿಮ್ಮ ಹೆಸರೋ ಅಥವಾ ನಾಗಮಾರಪಲ್ಲಿ ಎಂದು ಇದೆಯೋ; ಇದನ್ನು ನೀವು ಸ್ಪಷ್ಟ ಪಡಿಸಿ.

+ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಇದು ಮೇಲ್ಮನೆಯಲ್ಲಿ ಚರ್ಚೆಯಾಗಿ ಬಂದಿದೆ. ಆಗ ನಾಗಮಾರಪಲ್ಲಿಯವರು ಮಂತ್ರಿಯಾಗಿದ್ದರು. ಅದು ಪಾಸಾಗಿ ಇಲ್ಲಿಗೆ ಬಂದಿದೆ. ಆದರೆ ಹೆಸರು ಬದಲಾವಣೆ ಆಗಿಲ್ಲ. ಹೆಸರು ಬದಲಾವಣೆಯಾಗಿಲ್ಲ ಅಂತ ತಕ್ಷಣ ಆ ಬಿಲ್ ಅಲ್ಲಿ ಪಾಸ್ ಆಗಿ ಬಂದಿದೆ, ಈ ಮನೆ ಒಪ್ಪಿಗೆ ಪಡೆಯುವುದಕ್ಕೆ ನಾನೇ ಮಂಡಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವೇ ಮಂಡಿಸಿದ್ದೀರಿ, ನಿಮ್ಮ ಹೆಸರು ಇಲ್ಲ. ಇದು ಒಳ್ಳೆಯ ಸಂಪ್ರದಾಯವಲ್ಲ.

ಶ್ರೀ ಎಂ.ಸಿ. ನಾಣಯ್ಯ : ಇದು ಸರ್ಕಾರ, ಮಂತ್ರಿಗಳು ಸರ್ಕಾರದ ವತಿಯಿಂದ ಇರುವುದು. ಮಂತ್ರಿ ಇದ್ದಾರೆ, ಮಂತ್ರಿಗಳು ಬದಲಾವಣೆಯಾಗಿ ಬರುತ್ತಾರೆ. There is a Minister. Government is Government. It is a continuous thing. ಬದಲಾವಣೆ ಆಗಿದೆ ಅಂದ ತಕ್ಷಣ ಅವರಿಗೆ ಮಾಡುವುದಕ್ಕೆ ಅಧಿಕಾರ ಇಲ್ಲವೆಂದು ಹೇಳುವುದು ತಪ್ಪು. The Bill has become the property of the House.

ಉಪಾಧ್ಯಕ್ಷರು : ಕಾರ್ಯಕಲಾಪಗಳ ಪಟ್ಟಿಯಲ್ಲಿ ಮಂಜುನಾಥ್‌ರವರ ಹೆಸರು ಇದೆ.

ಶ್ರೀ ವಾಟಾಳ್ ನಾಗರಾಜ್ : ಮಸೂದೆ ಮಂಜುನಾಥ್‌ರವರ ಹೆಸರಿನಲ್ಲಿ ಇಲ್ಲ. ಗುರುಪಾದಪ್ಪ ನಾಗಮಾರಪಲ್ಲಿ ಅರಣ್ಯ ಸಚಿವರ ಹೆಸರಿನಲ್ಲಿ ಇದೆ. ಇದೇ ಸರಿ ಎಂದು ನೀವು ತೀರ್ಮಾನ ಮಾಡುವುದಾದರೆ ಇದು ಒಂದು ಅಯ್ಯಪ್ಪನ ಚಾವಡಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ನೀವು ಆ ತರಹ ಮಾತನಾಡಬಾರದು, ಅಯ್ಯಪ್ಪನ ಚಾವಡಿ ಎಂದರೆ ಏನು? ಸದನದ ಒಳ್ಳೆಯ ಗೌರವಾನ್ವಿತ ಸದಸ್ಯರು, ಒಳ್ಳೆಯ ಗೌರವಾನ್ವಿತ ಸಭೆ ಎಂದು ಹೇಳುತ್ತೀರಿ, ಮತ್ತೆ ಅಯ್ಯಪ್ಪನ ಚಾವಡಿ ಎಂದು ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ಸದಸ್ಯರೆಲ್ಲರೂ ಗೌರವಾನ್ವಿತರೇ, ಎರಡು ವರ್ಗ ಇಲ್ಲ. ಆಯಿತು ನಿಮ್ಮ ಇಚ್ಛೆ ಬಂದ ಹಾಗೆ ಮಾಡಿ.

SRI D. MANJUNATH (Forest Minister) : It is not a material mistake. ಮಾನ್ಯ ಉಪಾಧ್ಯಕ್ಷರೇ, ವಾಟಾಳ್ ನಾಗರಾಜ್‌ರವರಿಗೆ ನಾನು ಕೇಳುವುದು ಇಷ್ಟೆ. ಇದು ಮೇಲ್ಮನೆಯಲ್ಲಿ ಪಾಸಾಗಿರುವ ಮಸೂದೆ. ಆದರೆ ಏನಾಗಿದೆ, ಇವತ್ತಿನ ದಿವಸ ನಾನೇ ಮಸೂದೆ ಮಂಡಿಸಿದ್ದೇನೆ. ಅದು ಹಿಂದೆ ಪ್ರಿಂಟ್ ಆಗಿರುವುದು, ಅವರ ಹೆಸರಿನಲ್ಲಿದೆ, ಆ ಬಿಲ್ ಕಾಪಿಗಳನ್ನೇ ನಮಗೆ ನಿಮಗೆ ಎಲ್ಲರಿಗೂ ಕೊಟ್ಟಿದ್ದಾರೆ. ಅದಕ್ಕೋಸ್ಕರ ಅದೇನೂ ಅಂತಹ ತಪ್ಪಲ್ಲ. ಮೆಟೀರಿಯಲ್ ಮಿಸ್ಟೇಕ್ ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಈ ಮಸೂದೆಯನ್ನು ಮಂಡಿಸಬಾರದು ಎಂದು ಹೇಳುವುದಿಲ್ಲ. ಹಿಂದೆ ಆ ಸಂದರ್ಭದಲ್ಲಿ ಒಬ್ಬರು ಅರಣ್ಯ ಸಚಿವರಾಗಿದ್ದವರು ಮಂಡಿಸಿದ್ದಾರೆ. ಸದನದಲ್ಲಿ ಚರ್ಚೆಯಾಗಿದೆ, ಈಗ ಅವರ ಸ್ಥಾನದಲ್ಲಿ ಇನ್ನೊಬ್ಬ ಅರಣ್ಯ ಸಚಿವರು ನೇಮಕವಾಗಿದ್ದಾರೆ. ಹೆಸರಿನ ಬದಲಾವಣೆ ಮಾಡಬೇಕೆಂದು ಹೇಳುತ್ತಿದ್ದೆವು, ಇನ್ನೊಬ್ಬ ಅರಣ್ಯ ಸಚಿವರು ಬಂದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ಲೆಕ್ಕದಲ್ಲಿ ಇವರು ಅರಣ್ಯ ಸಚಿವರಲ್ಲ. On record, about this Bill only.

ಉಪಾಧ್ಯಕ್ಷರು : ಕಾರ್ಯಕ್ರಮ ಪಟ್ಟಿಯಲ್ಲಿ ಅವರ ಹೆಸರು ನಮೂದಾಗಿದೆ. ಮತ್ತೆ ಇದರ ಬಗ್ಗೆ ಚರ್ಚೆ ಮಾಡುವುದು ಬೇಡ.

+ ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ನಾನು ಎರಡು ವಿಷಯಗಳನ್ನು ಹೇಳುವುದಕ್ಕೆ ಹೊರಟಿದ್ದೇನೆ. 76ನೇ ಸೆಕ್ಷನ್‌ಗೆ ಏನು ಅಮೆಂಡ್‌ಮೆಂಟ್ ಮಾಡಿ ವಿಲೇಜ್ ಲೆವಲ್ ಕಮಿಟಿ ಮಾಡಬೇಕೆಂದು ಹೇಳಿದ್ದೀರಿ. ಅದರಲ್ಲಿ ಈಗಾಗಲೇ ಸನ್ಮಾನ್ಯ ಶಿವಪ್ಪನವರು ಮಾತನಾಡುವಾಗ ಹೇಳಿದ್ದಾರೆ, ಇದರಲ್ಲಿ ಖಚಿತವಾಗಿ ರಾಜಕೀಯ ಪ್ರವೇಶವಾಗುತ್ತದೆ. ಇದು ಒಂದು. ಇಲ್ಲಿ ಒಂದು ಕಡೆ ಸ್ಪಷ್ಟವಾಗಿ ಹೇಳಿದ್ದೀರಿ. ಸೆಕ್ಷನ್ 75-76ರಲ್ಲಿ ಅಧ್ಯಕ್ಷನು ನಾಮ ನಿರ್ದೇಶಿತ ತಾಲ್ಲೂಕು ಪಂಚಾಯಿತಿಗೆ ಒಬ್ಬ ಸದಸ್ಯ ಎಂದು ಹೇಳಿದ್ದೀರಿ. ನೇರವಾಗಿ ಹೇಳಿ ಬಿಟ್ಟಿದ್ದೀರಿ. ತಾಲ್ಲೂಕು ಪಂಚಾಯಿತಿಗೆ ಒಬ್ಬ ಸದಸ್ಯ. ಅಂದರೆ ಪ್ರತಿಯೊಂದು ಹಳ್ಳಿಗೂ ಇರತಕ್ಕಂತಹ ಒಂದು ಸಂಸ್ಥೆಗೆ ತಾಲ್ಲೂಕು ಪಂಚಾಯಿತಿ ಸದಸ್ಯರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವುದಾದರೆ, ಒಂದು ತಾಲ್ಲೂಕು ಪಂಚಾಯಿತಿಯಲ್ಲಿ ಸುಮಾರು 15 ರಿಂದ 17 ಎಷ್ಟರಮಟ್ಟಿಗೆ ಸದಸ್ಯರಿರುತ್ತಾರೆ, ಆದರೆ ಪ್ರತಿಯೊಂದು ಹಳ್ಳಿಯಲ್ಲಿ ನೀವು ಅಧ್ಯಕ್ಷರನ್ನು, ತಾಲ್ಲೂಕು ಪಂಚಾಯಿತಿ ಸದಸ್ಯರನ್ನು ಮಾಡಬೇಕೆಂದರೆ ಎಲ್ಲಿಂದ ತರುತ್ತೀರಿ, ಎರಡನೆಯದು ಎಲ್ಲಾ ಸಮಿತಿಗಳಿಗೆ ತಾಲ್ಲೂಕು ಪಂಚಾಯಿತಿ ಸದಸ್ಯರೊಬ್ಬರನ್ನು

ನಾಮಕರಣ ಮಾಡುವುದಾದರೆ ತಾಲ್ಲೂಕು ಪಂಚಾಯಿತಿಗೆ ರಾಜಕೀಯ ಪಕ್ಷಗಳ ಆಧಾರದ ಮೇಲೆ ಆಯ್ಕೆ ಆಗಿರುತ್ತದೆ. ಯಾವ ಪಕ್ಷಗಳ ತಾಲ್ಲೂಕು ಪಂಚಾಯಿತಿ ಸದಸ್ಯರನ್ನು ನೀವು ಆಯ್ಕೆ ಮಾಡುತ್ತೀರಿ? ನ್ಯಾಚುರಲ್ಲಾಗಿ ಯಾರು ಅಧಿಕಾರದಲ್ಲಿ ಇರುತ್ತಾರೆ, ಇದು ನಮಗೆ ಗೊತ್ತಿರತಕ್ಕಂತಹ ವಿಷಯ. ಅಂದರೆ ಅದರ ಅರ್ಥ ಮರ ಕಳ್ಳತನ ವಿಚಾರಣೆ ಮಾಡತಕ್ಕಂತಹ ಸಮಿತಿಯಲ್ಲಿ ನೀವು ರಾಜಕೀಯವನ್ನು ಇಡುತ್ತಿದ್ದೀರಿ ಎಂದು. ಕಳ್ಳತನ ವಿಚಾರಣೆ ಮಾಡುವುದಕ್ಕೆ, ಕಳ್ಳರ ವಿಚಾರಣೆ ಮಾಡುವುದಕ್ಕೆ ಈ ಸಮಿತಿಯಲ್ಲಿ ರಾಜಕೀಯವನ್ನು ಇಡುತ್ತಿದ್ದೀರಿ. ಇದರಲ್ಲಿ ಇನ್ನೊಂದು ವಿಚಿತ್ರವಾದ ವಿಷಯ ಇದೆ. ಸೆಕ್ಷನ್ 71 ರ ಪ್ರಕಾರ ಅಪರಾಧವನ್ನು ರಾಜಿ ಮಾಡಿಕೊಳ್ಳುವ ಅಧಿಕಾರವನ್ನು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬೇಕಾದ ಶರತ್ತುಗಳಿಗೆ ಒಳಪಟ್ಟು ಅಧಿಸೂಚನೆ ಮೂಲಕ 52ನೇ ಪ್ರಕರಣ ಅಥವಾ 73, 86 ಮತ್ತು 87 ಪ್ರಕರಣದ ಅಪರಾಧಗಳನ್ನು ಹೊರತು ಪಡಿಸಿ, ಇವೆಲ್ಲವನ್ನೂ ಬಿಟ್ಟು ಅದರಲ್ಲಿ 86-73 ಭಾರಿ ವ್ಯಾಲ್ಯುಯಬಲ್ ವಸ್ತುಗಳನ್ನು ಕಳ್ಳತನ ಮಾಡುವ ಸೆಕ್ಷನ್ಸ್ ಬರುತ್ತವೆ. 86, 77, 72 ಮತ್ತು 82 ಇವೆಲ್ಲವನ್ನೂ ಹೊರತು ಪಡಿಸಿ ಅಪರಾಧಗಳನ್ನು ಮಾಡಿದವರ ಜೊತೆ ರಾಜಿ ಮಾಡಿಕೊಳ್ಳುವುದು. ಇದು ಎಲ್ಲಿ ಯಾವ ಕಾನೂನಿನಲ್ಲಿ ಇದೆ, ಅಪರಾಧಗಳನ್ನು ರಾಜಿ ಮಾಡಿಕೊಳ್ಳತಕ್ಕಂತಹ ಈ ವ್ಯವಸ್ಥೆ ಈ ದೇಶದಲ್ಲಿ ಇದೆಯಾ? ಅದೇ ಮೊದಲನೇ ತಪ್ಪು. ರಾಜಿ ಮಾಡಿಕೊಳ್ಳುವುದಾದರೆ, ಇದು ಒಂದನೇ ಅಂಶ. ಈ ರಾಜಿ ಮಾಡಿಕೊಳ್ಳತಕ್ಕಂತಹ ಅಂಶ ಅಧಿಕಾರಿ ಒಬ್ಬರಿಗೆ ರಕ್ಷಣೆ ಕೊಟ್ಟ ಹಾಗಾಗುತ್ತದೆ. ಅಧಿಕಾರಿ ಮತ್ತು ಅಪರಾಧ ಮಾಡಿದವನು ಇಬ್ಬರೂ ಸೇರಿಕೊಂಡು ಯಾವುದೋ ಒಬ್ಬ ಅಧಿಕಾರಿಗೆ ನೀವು ಈ ಅಧಿಕಾರವನ್ನು ಕೊಡುತ್ತೀರಿ ಎಂದರೆ ಇದರ ಅರ್ಥ ಏನು, ಆ ಅಧಿಕಾರಿ ಸರ್ವ ಸ್ವತಂತ್ರ್ಯವಾಗಿ ತನಗೆ ಇಷ್ಟ ಬಂದ ರೀತಿಯಲ್ಲಿ ಅದನ್ನು ರಾಜಿ ಮಾಡಿಕೊಳ್ಳುವುದು, ರಾಜಿ ಮಾಡಿಕೊಂಡ ಸಂದರ್ಭದಲ್ಲಿ ಏನೆಲ್ಲಾ ಆಗಬಹುದು ಎಂದು ನಮಗೆ ಅನುಭವ ಇದೆ. ಆದ್ದರಿಂದ 79 ಮತ್ತು 76 ಈ ಎರಡೂ ಕೂಡ ಸರಿಯಲ್ಲ. ನೀವು ವಿಲೇಜ್ ಲೆವಲ್‌ನಲ್ಲಿ ಕಮಿಟಿಯನ್ನು ಮಾಡುವ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿಕೊಳ್ಳತಕ್ಕಂತಹ ಪದ್ಧತಿಯನ್ನು ಕೈ ಬಿಡಬೇಕು. ಇದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಈ ರಾಜಿ ಮಾಡಿಕೊಳ್ಳತಕ್ಕಂಥದ್ದರಲ್ಲಿ ಹೇಳಿದರೆ, ಒಬ್ಬ ಅಧಿಕಾರಿಗೆ ಎಲ್ಲಾ ಅಧಿಕಾರವನ್ನೂ ಕೊಟ್ಟು ಅವನು ಹೇಗೆ ಬೇಕಾದರೂ ರಾಜಿ ಮಾಡಿಕೊಳ್ಳಬಹುದು.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಏಳನೇ ಉಪ ಪ್ರಕರಣದಲ್ಲಿ ಉಪ ಖಂಡದಲ್ಲಿ ಕೋಕೋ ಬೀಜಗಳು ಅಥವಾ ಕಾಯಿ ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು ಎಂದು ಇದೆ. ಅರಣ್ಯ ಉತ್ಪನ್ನಗಳು ಎಂದು ಇದೆ. ಇದನ್ನು ಬಹಳ ಸೂಕ್ಷ್ಮವಾಗಿ ದಯಮಾಡಿ ಅರಣ್ಯ ಮಂತ್ರಿಗಳು ಅವಲೋಕನ ಮಾಡಿ ಇನ್ನು ಕೆಲವು ಹೆಸರುಗಳಿವೆ, ಇಲ್ಲಿ ಸೇರಿಸಬೇಕು. ಅದರಲ್ಲಿ ಅರಣ್ಯದಲ್ಲಿ ದೊರೆತ, ಅಥವಾ ಅರಣ್ಯದಿಂದ ತಂದ, ಅಥವಾ ತಾರದೆ ಕೆಳಕಂಡವು ಅರಣ್ಯ ಇಲಾಖೆಯಿಂದ ತಾರದೆ ಇದ್ದರೂ ಕೂಡ ಕೆಳಕಂಡ ಕೆಲವು ವಸ್ತುಗಳನ್ನು ಸಾಗಾಣಿಕೆ ಮಾಡಿದರೆ ಹಿಡಿಯಲಿಕ್ಕೆ ಅವಕಾಶ ಇದೆ. ಈಗಿರತಕ್ಕಂತಹ ರೀತಿಯಲ್ಲಿ ಉದಾಹರಣೆಗೆ ಮಾನ್ಯ

ನಾಣಯ್ಯನವರಿಗೆ ಗೊತ್ತಿದೆ, ಸೀಗೆಕಾಯಿ ಭಂಟ್ವಾಳ ಕಾಯಿ ಮಲೆನಾಡಿನಲ್ಲಿ ನಮ್ಮ ಕಾಂಪೌಂಡ್‌ನಲ್ಲಿ ಕೋಕೋ ಬೀಜ ಬೆಳೆಯುತ್ತೇವೆ. ಅವುಗಳನ್ನು ಹೇಗೆ ಕೈ ಬಿಡುತ್ತೀರಿ, ಅರಣ್ಯದಿಂದ ತಾರದೆ ಇರತಕ್ಕಂತಹ ವ್ಯಕ್ತಿಗಳು ಖಾಸಗಿ ಜಮೀನಿನಲ್ಲಿ ಬೆಳೆದಿರತಕ್ಕಂಥದ್ದನ್ನು ಕೈ ಬಿಡುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕಾಗಿದೆ.

6.50 ಪಿ.ಎಂ

ಇದರಿಂದ ತೀರಾ ಹೆರ್‍ಯಾಸ್‌ಮೆಂಟ್ ಆಗುತ್ತದೆ. ನಮ್ಮ ಅರಣ್ಯಾಧಿಕಾರಿಗಳು ಅರಣ್ಯ ಉತ್ಪನ್ನಗಳನ್ನು ಟೆಂಡರ್ ಹಾಕುತ್ತಾರೆ, ಅಲ್ಲಿ ಗುತ್ತಿಗೆ ಹಿಡಿದಿರತಕ್ಕಂಥ ಗುತ್ತಿಗೆದಾರರು ಯಾರಿದ್ದಾರೆ, ಅವರು ಏನು ಮಾಡುತ್ತಾರೆಂದರೆ ಅಲ್ಲಿನ ರೈತರು ತಮ್ಮ ಸ್ವಂತ ಜಾಗಗಳಲ್ಲಿ ಬೆಳೆದಿರತಕ್ಕ ರೈತರು ಸೀಗೆಕಾಯಿ ಮತ್ತು ಅಂಟುವಾಳ ಕಾಯಿಗಳನ್ನು ತಂದು ಮನೆಗಳಲ್ಲಿಟ್ಟಿದ್ದರೆ ಮನೆಗಳಿಗೆ ನುಗ್ಗಿ ತೆಗೆದುಕೊಂಡು ಹೋಗಿರತಕ್ಕಂಥ ಪ್ರಕರಣಗಳು ಸಂಭವಿಸಿ ನಂತರ ಅವರಿಗೂ ಇವರಿಗೂ ಸಾಕಷ್ಟು ಹೊಡೆದಾಟ ಆಗುವುದು ಉಂಟು. ಅರಣ್ಯ ಉತ್ಪನ್ನಗಳು ಬರುವ ಸಂದರ್ಭದಲ್ಲಿ ಅಂದರೆ ಏಪ್ರಿಲ್, ಮೇ ತಿಂಗಳಿನಲ್ಲಿ ಪೊಲೀಸರು ಒಂದಿಷ್ಟು ತಿನ್ನುವುದು ಜೊತೆಗೆ ಅರಣ್ಯ ಗುತ್ತಿಗೆದಾರರೂ ಸಹ ಒಂದಿಷ್ಟು ತಿನ್ನುವುದು ಮಾಡಿ ಒಂದು ರೀತಿಯ ಮೇಜವಾನಿ ನಡೆಸುತ್ತಿದ್ದಾರೆಯೇ ಹೊರತು ಅವುಗಳ ಬೆಳೆದಂಥ ರೈತರುಗಳಿಗೆ ಸಿಗುವುದಿಲ್ಲ. ಇದನ್ನು ತಪ್ಪಿಸುವುದಕ್ಕೆ ಬಹಳ ದೊಡ್ಡ ಶ್ರಮವಾಗುತ್ತದೆ. ತಿದ್ದುಪಡಿಯಲ್ಲಿ ತಾವು ಕೋಕೋ ಬೀಜವನ್ನು ತಂದಿದ್ದೀರಿ, ಇದು ಸ್ವಾಗತಾರ್ಹವಾದ ವಿಚಾರ. ಇದರ ಜೊತೆಗೆ ಖಾಸಗಿ ಜಮೀನಿನಲ್ಲಿ ಬೆಳೆದಿರತಕ್ಕ ಅಂಟುವಾಳ ಮತ್ತು ಸೀಗೆಕಾಯಿಗಳನ್ನು ಸೇರಿಸಿದ್ದರೆ ತುಂಬಾ ಒಳ್ಳೆಯದಾಗುತ್ತದೆ. ದಯಮಾಡಿ ಅದನ್ನು ಸೇರಿಸಬೇಕೆಂದು ನನ್ನ ವಿನಂತಿ ಇದೆ. ಮಲೆನಾಡಿನ ಭಾಗದ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಇದರಿಂದ ಉಪದ್ರವ ಆಗುತ್ತಿದೆ. ಮತ್ತೊಂದು ವಿಚಾರವೇನೆಂದರೆ, ಸೆಕ್ಷನ್ 31ಎ ನಲ್ಲಿ ಜಂಟಿ ಅರಣ್ಯ ಯೋಜನೆ ಮತ್ತು ಅರಣ್ಯದ ವ್ಯವಸ್ಥಾಪನೆಗಾಗಿ ಗ್ರಾಮ ಅರಣ್ಯ ಸಮಿತಿಯ ರಚನೆಯನ್ನು ತಂದಿದ್ದೀರಿ. ಈ ಕುರಿತು ಈಗಾಗಲೇ ನಿಯಮಾವಳಿಯನ್ನು ರಚಿಸಿ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿದ್ದಾರೆ. ಗ್ರಾಮದಲ್ಲಿರುವ ಪ್ರತಿ ಕುಟುಂಬದಲ್ಲಿನ ಇಬ್ಬರು ಒಂದೊಂದು ರೂಪಾಯಿ ಶುಲ್ಕ ಕಟ್ಟಿ ಗ್ರಾಮ ಅರಣ್ಯ ಸಮಿತಿಗೆ ಸದಸ್ಯರಾಗಲು ಅರ್ಹತೆ ಇದೆ. ಅಂತಹ ಸದಸ್ಯರುಗಳು ಚುನಾಯಿಸಿರತಕ್ಕ ಒಂದು ಮಂಡಳಿ ಈಗಾಗಲೇ ತನ್ನ ಕಾರ್ಯನಿರ್ವಹಿಸುತ್ತಿದೆ. ಅದಕ್ಕೆ ತಾಲ್ಲೂಕು ಪಂಚಾಯಿತಿಯವರನ್ನು, ಮುಂತಾದವರನ್ನು ಸೇರಿಸುವಂಥ ವ್ಯವಸ್ಥೆಯನ್ನು ತಾವು ಮಾಡಿದ್ದೀರಿ. ಜಂಟಿ ಅರಣ್ಯ ಯೋಜನೆಯ ಒಂದು ಕಾನ್‌ಸೆಪ್ಟ್ ಏನಿದೆಯೆಂದರೆ, ಕಾಡು ನನ್ನದೆಂಬ ಒಂದು ಭಾವನೆ ಗ್ರಾಮಸ್ಥರಲ್ಲಿ ನಿರ್ಮಾಣವಾಗಿ ಆ ಮೂಲಕ ಕಾಡು ಬೆಳೆಯುವುದಕ್ಕೆ ಅನುಕೂಲವಾಗಿ ಕಾಡಿನ ಆಸ್ತಿಯಲ್ಲಿ ನನಗೂ ಪಾಲು ಸಿಗುತ್ತದೆಂಬ ಕಾರಣಕ್ಕೆ ಆ ಸಮಿತಿಯಲ್ಲಿ ಗ್ರಾಮಸ್ಥರು ಭಾಗವಹಿಸಲಿ ಎಂಬ ದೃಷ್ಟಿಯಿಂದ ಈ ತಿದ್ದುಪಡಿ ತಂದಿದ್ದೀರಿ. ಆದರೆ, ಈಗ ಜಾರಿಗೆ ತಂದಿರುವ ಅರಣ್ಯ ಸಮಿತಿಗಳನ್ನು ನಮ್ಮ ಅರಣ್ಯ ಅಧಿಕಾರಿಗಳು ಕುತ್ತಿಗೆ ಹಿಚುಕುವಂಥ ಕೆಲಸ ಮಾಡಿದ್ದಾರೆ. ತಾವು ಇದನ್ನು ಗಮನಿಸಿದ್ದೀರೋ ಇಲ್ಲವೋ ಗೊತ್ತಿಲ್ಲ. ನಿಯಮಾವಳಿ ಪ್ರಕಾರ ಸರ್ಕಾರ ಈ ಗ್ರಾಮ ಅರಣ್ಯ

ಸಮಿತಿಗಳಿಂದ ಏನು ಕಾಡನ್ನು ಬೆಳೆಸಬೇಕಾಗಿದೆ. ಅದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷ ಮತ್ತು ಸ್ಥಳೀಯ ಫಾರೆಸ್ಟರ್ ಸದಸ್ಯ ಕಾರ್ಯದರ್ಶಿಯಾಗಿದ್ದು ಹಣವನ್ನು ಬ್ಯಾಂಕಿನ ಜಂಟಿ ಖಾತೆಯಲ್ಲಿ ಜಮಾ ಮಾಡಬೇಕಾಗಿತ್ತು. ಆದರೆ, ಯಾವುದೇ ಗ್ರಾಮ ಅರಣ್ಯ ಸಮಿತಿಗಳಲ್ಲೂ ಕೂಡ ಈ ರೀತಿ ಹಣವನ್ನು ಜಮಾ ಮಾಡುತ್ತಿಲ್ಲ. ಅರಣ್ಯ ಇಲಾಖೆಯಲ್ಲಿ ಒಂದು ನಿಯಮವಿದೆ. ನಾವೇ ಕೆಲಸ ಮಾಡಿಸುತ್ತೇವೆ, ನೀವೇನೂ ಇಲ್ಲ, ನೀವೆಲ್ಲಾ ಹೌದಪ್ಪಗಳಾಗಿ ನಿರ್ಣಯ ಮಾಡುವುದಕ್ಕೋಸ್ಕರ ನಿಮ್ಮ ಕಮಿಟಿ ಎನ್ನುವುದು, ಇವರು ಕೆಲಸ ಮಾಡಿಸುವುದು. ಡಿ.ಎಫ್.ಓ. ಚೆಕ್ ಕೊಡುವಾಗ ತನ್ನ ಪರ್ಸಂಟೇಜ್ ಮುರಿದುಕೊಂಡು ಎ.ಸಿ.ಎಫ್.ಗೆ ಕೊಡುತ್ತಾನೆ. ಎ.ಸಿ.ಎಫ್. ರೇಂಜರ್‌ಗೆ ಕೊಡುವಾಗ ತನ್ನ ಪರ್ಸಂಟೇಜ್ ಮುರಿದುಕೊಂಡು ಕೊಡುತ್ತಾನೆ. ಅದೇ ರೀತಿ ರೇಂಜರ್ ತನ್ನ ಪರ್ಸೆಂಟೇಜ್ ಮುರಿದುಕೊಂಡು ಫಾರೆಸ್ಟರ್‌ಗೆ ಕೊಡುತ್ತಾನೆ. ಇದು ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ. ಇದನ್ನು ಬಿಟ್ಟುಕೊಡುವುದಕ್ಕೆ ಅವರ್‍ಯಾರೂ ಕೂಡ ತಯಾರಿಲ್ಲ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರೆಂಬುದನ್ನು ಹೇಳಬೇಕು. ಇದರಲ್ಲಿ ಏನೂ ಉಲ್ಲೇಖವಿಲ್ಲ, ಯಾವ ರೀತಿ ಇದಕ್ಕೆ ಅನುದಾನ ಕೊಡುತ್ತೀರಿ? ಅನುದಾನ ಹೇಗೆ ಇಡಬೇಕು, ಬ್ಯಾಂಕಿನಲ್ಲಿ ಹೇಗೆ ಡಿಪಾಸಿಟ್ ಇಡಬೇಕು, ಹೇಗೆ ಅದನ್ನು ಉಪಯೋಗಿಸಿಕೊಳ್ಳಬೇಕೆಂಬ ಬಗ್ಗೆ ಕೂಡ ಏನೇನೂ ಅದರಲ್ಲಿ ತಿಳಿಸಿಲ್ಲ. ಆದುದರಿಂದ, ಇದನ್ನು ಸ್ಪಷ್ಟಪಡಿಸಬೇಕಾಗುತ್ತದೆ ಮತ್ತು ಅರಣ್ಯ ಸಮಿತಿಗಳಿಗೆ ಹೆಚ್ಚು ಶಕ್ತಿ, ದೃಢತೆ ಬರಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಅರಣ್ಯ ಇಲ್ಲದಿರುವ ಜಾಗಗಳಲ್ಲಿ ಜನರು ಅರಣ್ಯ ಬೆಳೆಸಿ ಅದರ ಉತ್ಪನ್ನದಲ್ಲಿ ತಾವು ಅರ್ಧ ಭಾಗ ಹಂಚಿಕೊಂಡು ಶೇಕಡ 25ರಷ್ಟು ಆ ಊರಿಗೂ ಕೂಡ ವಿನಿಯೋಗವಾಗುವಂತೆ ಮಾಡಬೇಕಾಗುತ್ತದೆ. ಮರಗಳನ್ನು ಸ್ವಂತ ಉಪಯೋಗಕ್ಕೆ ಕೊಡುವಾಗ ನಮ್ಮಲ್ಲಿ 90 ಘನ ಅಡಿಗಳಷ್ಟು ಮರವನ್ನು ತಮ್ಮ ಕಾಂಪೌಂಡ್ ಒಳಗಡೆ ಬೆಳೆದಿದ್ದರೆ ಅವರ ಉಪಯೋಗಕ್ಕೆ ಕೊಡಬೇಕಾಗುತ್ತದೆ. ಈ ಕುರಿತ ನಿಯಮಾವಳಿ ಈಗಾಗಲೇ ಅರಣ್ಯ ಇಲಾಖೆಯಲ್ಲಿ ಇದೆ. ತಮ್ಮ ಸ್ವಂತ ಮರವನ್ನು ಉಪಯೋಗಿಸಿಕೊಳ್ಳುವುದಕ್ಕೆ ಮಾನ್ಯ ಸದಸ್ಯರಾದ ಶಿವಪ್ಪನವರು ಹೇಳಿದಂತೆ ಅತ್ಯಂತ ಕಠಿಣವಾದ ಪರಿಸ್ಥಿತಿ ಇದೆ. ಮರಗಳನ್ನು ಪಡೆದುಕೊಳ್ಳಬೇಕಾದರೆ ಏನೇನು ದಾಖಲಾತಿಗಳನ್ನು ತರಬೇಕೆಂದು ಶಿವಮೊಗ್ಗ ಜಿಲ್ಲೆಯ ಕನ್ಸರ್ವೇಟರ್ ಆಫ್ ಫಾರೆಸ್ಟ್‌ನವರು ತಿಳಿಸಿದ್ದಾರೆ. ನಾನು, ಶಿವಪ್ಪನವರು, ಅರಣ್ಯ ಮಂತ್ರಿಗಳು ಮತ್ತು ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್‌ನವರು ರಿಟೈರ್ ಆಗಿ ಮನೆಗೆ ಹೋದರೆ, ನಂತರ ಅವರೇನಾದರೂ ಈ ಸಂಬಂಧವಾಗಿ ಅಪ್ಲೈ ಮಾಡುವುದಾದರೆ ಅವರ ಹಣೆಬರಹದಲ್ಲೂ ಕೂಡ ಆ ಮರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದರಿಂದಾಗಿಯೇ ನಮ್ಮ ಊರುಗಳಲ್ಲಿ ಏನು ಮಾಡುತ್ತಾರೆಂದರೆ ಬೆಳೆದಿರತಕ್ಕಂಥ ಸಾಗುವಾನಿ ಮರವನ್ನು ಅವರು ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ಒಂದು ಘಟನೆ ನಡೆದಿದೆ. ಏನೆಂದರೆ, ಒಬ್ಬ ಹಲಸಿನ ಮರ ಬೆಳೆಸಿದ್ದ, ಆತ ಬಡವನಾಗಿದ್ದು ಗುಡಿಸಲು ನಿವಾಸಿಯಾಗಿದ್ದ. ಮರವನ್ನು ಕುಯ್ದುಕೊಳ್ಳುವುದಕ್ಕೆ ಆತನಿಗೆ ಲೈಸೆನ್ಸ್ ಸಿಗಲಿಲ್ಲ. ಆತನ ಮನೆ ಬಾಗಿಲಿಗೆ ಯಾವುದೋ ಕೇಸ್‌ಗೆ ಹೋದಂಥ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಆತನನ್ನು ಉದ್ದೇಶಿಸಿ ಈ ಮರವನ್ನು ನನಗೆ ಕೊಡುತ್ತೀಯಾ ಎಂದಾಗ ಆತನಿಗೆ ಭಾರಿ ಖುಷಿಯಾಗಿ ಏನು ಕೊಡುತ್ತೀರಿ ಎಂದು ಕೇಳಿದಾಗ,

ಐದು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಹೇಳಿದ್ದಾನೆ. ಅಷ್ಟಾದರೂ ಸಿಕ್ಕಿತಲ್ಲವೆಂದು ಭಾವಿಸಿ ಆತನಿಗೆ ಒಂದು ಅಗ್ರಿಮೆಂಟ್ ಮಾಡಿಕೊಟ್ಟಿದ್ದಾನೆ. ಇದು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಜರುಗಿದ ಘಟನೆ. ಆತ ಮರವನ್ನು ಕೊಯ್ದು ಕೆಡವಿದ. ನಂತರ ಪ್ರಾಮಾಣಿಕವಾದ ಒಬ್ಬ ಫಾರೆಸ್ಟ್ ಆಫೀಸರ್ ಇನ್ಸ್‌ಪೆಕ್ಷನ್‌ಗೆ ಹೋದಂಥ ಸಂದರ್ಭದಲ್ಲಿ ಅದನ್ನು ಗಮನಿಸಿ ಆತನಿಗೆ ಏನು ಹೇಳಿದರೆಂದರೆ, 'ಈ ಮರ ಮಾರಾಟ ಮಾಡಿಕೊಂಡರೆ ನಿನ್ನ ಬಡತನ ಹೋಗುತ್ತದೆ, ಇದಕ್ಕೆ ಸುಮಾರು ಒಂದೂವರೆ ಲಕ್ಷ ರೂಪಾಯಿಗಳನ್ನು ಕಿಮ್ಮತ್ತು ಇದೆ ಎನ್ನುತ್ತಾರೆ. ಬಳಿಕ ಸರ್ಕಲ್ ಇನ್ಸ್‌ಪೆಕ್ಟರ್ ನಾನೇನು ಮಾಡಲಿ ಎಂದು ತಲೆ ತೂರಿಸಿಕೊಂಡು ಬರುತ್ತಾನೆ. ನಾನು ಹೇಳಿದೆ: ಏನಾದರೂ ಆಗಲಿ ಅವರಿಗೆ ಮರವನ್ನು ಕೊಡಬೇಡಿ, ಎಂದು ಆತನನ್ನು ಎಳೆದುಕೊಂಡು ಹೋಗಿ ಎಂದಾಗ ಪೊಲೀಸ್ ಲಾಕಪ್‌ನಲ್ಲಿ ಆತನನ್ನು ಹಾಕಿ ಒದ್ದರು. ಖಾಲಿ ಪೇಪರ್‌ಗೆ ಸಿಗ್ನೇಚರ್ ಹಾಕಿಸಿಕೊಂಡಿದ್ದು ನಾನು ಹೋಗಿ ಹೆದರಿಸಬೇಕಾಯಿತು. ಈ ರೀತಿಯಲ್ಲಿ ನನಗೆ ಲೈಸೆನ್ಸ್ ಪಡೆಯುವುದಕ್ಕಾಗದೆ ಬೇರೆ ಯಾರಿಗಾದರೂ ಕೊಡುವ ವ್ಯವಸ್ಥೆ ಇದೆ. ಇವೊತ್ತು ನಮ್ಮ ಮಲೆನಾಡಿನ ತಾಲ್ಲೂಕುಗಳಿಗೆ ಬಂದಂಥ ಎಲ್ಲಾ ತಹಶೀಲ್ದಾರ್‌ಗಳಿರಬಹುದು, ರೇಂಜರ್‌ಗಳಿರಬಹುದು, ಎಸಿಎಫ್‌ಗಳಿರಬಹುದು, ಜಿಲ್ಲಾಧಿಕಾರಿಗಳಿರಬಹುದು, ಎಲ್ಲರೂ ಸಾಗುವಾನಿ ಮರ ತಂದು ಬೆಂಗಳೂರಿನಲ್ಲಿ ಮನೆ ಕಟ್ಟುತ್ತಿದ್ದಾರೆ. ಆದರೆ, ಅಲ್ಲಿಯೇ ಬೆಳೆದಿರುವವರಿಗೆ ಅದು ಸಿಗುವುದಿಲ್ಲ, ಒಂದೊಂದು ಸಾಗುವಾನಿ ಮರವನ್ನು ರೂ. 500, 1,000 ಗಳಿಗೆ ಮಾರಾಟ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ಇರುವುದರಿಂದ ನಿಮ್ಮ ಅಧಿಕಾರಿಗಳನ್ನು ಕರೆದು ಕುಳಿತುಕೊಂಡು ಚರ್ಚಿಸಿ ಅವುಗಳನ್ನು ಪ್ರಾಮಾಣಿಕವಾಗಿ ಉಪಯೋಗಿಸಿಕೊಳ್ಳುವಂಥ ಜನರಿಗೆ, ಬೋನಫೈಡ್ ಯೂಸ್‌ಗೆ ಕೊಡುವುದಕ್ಕೆ ನಿಯಮಾವಳಿಯನ್ನು ಸರಳೀಕರಣಗೊಳಿಸಬೇಕಾಗುತ್ತದೆ. ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ, ಮರವೂ ಉಳಿಯುವುದಿಲ್ಲ. ಕಾಡಿನಲ್ಲಿ ಮತ್ತಷ್ಟೂ ಕಳ್ಳತನವಾಗುತ್ತದೆ. ಈ ಸ್ವತ್ತನ್ನು ಬಿಟ್ಟುಕೊಡುವಂಥ ಒಂದು ನಿಯಮಾವಳಿ ತಂದಿದ್ದೀರಿ. ಮಾನ್ಯ ಮಂತ್ರಿಗಳು ಒಮ್ಮೆ ನಮ್ಮ ಮಲೆನಾಡಿನ ತಾಲ್ಲೂಕಿನಲ್ಲಿರುವ ರೇಂಜ್ ಫಾರೆಸ್ಟ್ ಆಫೀಸ್‌ಗಳಿಗೆ ಭೇಟಿ ನೀಡಿ ಅಲ್ಲಿ ಏನೇನು ಸ್ವತ್ತುಗಳಿವೆ, ಯಾವ್ಯಾವ ಸ್ವತ್ತುಗಳನ್ನು ಹಿಡಿದಿಟ್ಟಿದ್ದಾರೆ ಎಂಬುದನ್ನು ನೋಡಬೇಕು. ಅಲ್ಲಿ ಮಾರುತಿ ಕಾರುಗಳು, ಲಾರಿಗಳು, ಮತ್ತು ಕೋಟಿಗಟ್ಟಳೆ ಬೆಲೆ ಬಾಳುವ ವಸ್ತುಗಳನ್ನೆಲ್ಲಾ ಸೀಜ್ ಮಾಡಿ ಇಟ್ಟಿದ್ದಾರೆ.

ಉಪಾಧ್ಯಕ್ಷರು : ತಾವು ತಿದ್ದುಪಡಿ ಬಗ್ಗೆ ಮಾತ್ರ ಮಾತನಾಡಬೇಕು.

ಶ್ರೀ ಅರಗ ಜ್ಞಾನೇಂದ್ರ : ನಾನು ನಿಯಮಾವಳಿ ಮೇಲೆ ತಂದಿರುವ ತಿದ್ದುಪಡಿ ಬಗ್ಗೆಯೇ ಮಾತನಾಡುತ್ತಿದ್ದೇನೆ. 'ಸೆಕ್ಷನ್ 62ನೇ ಪ್ರಕರಣದ ಮೇರೆಗೆ ವಶಪಡಿಸಿಕೊಳ್ಳಲಾದ ಸ್ವತ್ತಿನ ಬಿಡುಗಡೆ ಮಾಡಲು ಅಧಿಕಾರ' ಇದರ ಬಗ್ಗೆಯೇ ಮಾತನಾಡುತ್ತಿದ್ದೇನೆ. ಆದರೆ, ನಾನು ಸೆಕ್ಷನ್ ಅನ್ನು ಉಲ್ಲೇಖಿಸುತ್ತಿಲ್ಲ, ಜನರಲ್ ಆಗಿ ಮಾತನಾಡಿದೆ, ಇದಕ್ಕೆ ಸಂಬಂಧಿಸಿದಂತೆಯೇ ಮಾತನಾಡುತ್ತಿದ್ದೇನೆ, ಬೇರೇನೂ ಮಾತನಾಡಲಿಲ್ಲ. ಕೋಟಿಗಟ್ಟಲೆ ಬೆಲೆ ಬಾಳುವ ಸ್ವತ್ತು ಅಲ್ಲಿ ಮಣ್ಣಿನಲ್ಲಿ ಬಿದ್ದಿವೆ. ಇದರಿಂದ ಈ ರಾಜ್ಯಕ್ಕೆ, ರಾಷ್ಟ್ರಕ್ಕೆ ದೊಡ್ಡ ನಷ್ಟವಾಗುತ್ತಿದೆ. ಆದುದರಿಂದ, ಇದನ್ನು ತತ್‌ಕ್ಷಣ ಹರಾಜು ಮಾಡಿ,

ಅದರಿಂದ ಬಂದ ಹಣವನ್ನು ಜಮಾ ಮಾಡುವುದಕ್ಕೆ ಏನಾದರೊಂದು ವ್ಯವಸ್ಥೆ ಮಾಡಿ ಇವೊತ್ತು ಬೆಳಿಗ್ಗೆ ಕೂಡ ನಾನು ಮಾನ್ಯ ಮಂತ್ರಿಗಳ ಬಳಿ ಮಾತನಾಡಿದೆ. ನಮ್ಮ ತಾಲ್ಲೂಕುಗಳಲ್ಲಿ ಅನೇಕ ಸೂಕ್ಷ್ಮವಾದ ಪ್ರದೇಶಗಳಿವೆ, ಅಲ್ಲಿನ ರೇಂಜರ್‌ಗಳಿಗೆ ಒಂದೇ ಒಂದು ವಾಹನವಿಲ್ಲ. ಮೊನ್ನೆ ದಿವಸ ಸದನದಲ್ಲಿ ಒಂದು ವಿಚಾರ ಪ್ರಸ್ತಾಪವಾಯಿತು. ಸದಸ್ಯರಾದ ಕೆ. ಜಯರಾಮಶೆಟ್ಟರು ವಿಷಯ ಪ್ರಸ್ತಾಪಿಸಿ ಅವರ ಕ್ಷೇತ್ರದ ಜನರು ಯಾವುದೋ ಕೆಲಸದ ನಿಮಿತ್ತ ನನ್ನ ಕ್ಷೇತ್ರಕ್ಕೆ ಬಂದಿದ್ದಾಗ ಅವರು ಗಂಧದ ಕಳ್ಳರೆಂದು ತಿಳಿದುಕೊಂಡು ಅರಣ್ಯಾಧಿಕಾರಿಗಳು ಅವರ ಮೇಲೆ ಗುಂಡು ಹಾರಿಸಿದಾಗ ಇಬ್ಬರು ತಮ್ಮ ಕಣ್ಣನ್ನು ಕಳೆದುಕೊಂಡರು. ಅವರುಗಳು ವಾಹನವನ್ನು ನಿಲ್ಲಿಸದೆ ಓಡಿಸಿದರೆಂದು ತಿಳಿದು ಗುಂಡು ಹಾರಿಸಿದರು, ಅರಣ್ಯಾಧಿಕಾರಿಗಳು ಖಾಸಗಿ ವಾಹನದಲ್ಲಿ ಹೋಗಿದ್ದರು. ಇವರು ಗಂಧ ತೋರಿಸಿದ ಕೂಡಲೇ ದರೋಡೆಕೋರರೆಂದು ಅವರು ಓಡಿ ಹೋದರು, ಅವರು ಓಡಿ ಹೋಗುವುದನ್ನು ನೋಡಿ ಅವರೇ ಗಂಧದ ಕಳ್ಳರೆಂದು ಭಾವಿಸಿ ಗುಂಡು ಹಾರಿಸಿದ್ದಾರೆ, ಆದರೆ, ಅವರು ನಿಜವಾದ ಕಳ್ಳರಾಗಿರಲಿಲ್ಲ, ಅಮಾಯಕರಾಗಿದ್ದರು. ಅದಕ್ಕೋಸ್ಕರ, ಅವರಿಗೆ ಒಂದು ವಾಹನ ಬಳಸಿಕೊಳ್ಳುವುದಕ್ಕೆ ನೀವೇನೂ ಎಕ್ಸ್‌ಟ್ರಾ ದುಡ್ಡು ಖರ್ಚು ಮಾಡುವಂಥ ಅವಶ್ಯಕತೆಯಿಲ್ಲ. ಹಿಡಿದಿಟ್ಟಿರುವ ವಾಹನಗಳಲ್ಲೇ ಒಂದನ್ನು ವಲಯ ಅರಣ್ಯಾಧಿಕಾರಿಗಳಿಗೆ ಬಳಸಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಆಗ ಖಂಡಿತವಾಗಿಯೂ ಅವರಿಗೆ ದೊಡ್ಡ ಶಕ್ತಿ ಬಂದು ದಕ್ಷತೆಯಿಂದ ಕೆಲಸ ಮಾಡಲು ಅನುಕೂಲವಾಗುತ್ತದೆ. ಈ ರೀತಿ ತಾವು ಮಾಡಬೇಕು. ತಾವು ಅನೇಕ ತಿದ್ದುಪಡಿಗಳನ್ನು ತಂದಿದ್ದೀರಿ, ಇದರ ಬಗ್ಗೆ ಇನ್ನು ಕೂಡ ಸವಿಸ್ತಾರವಾಗಿ ಚರ್ಚೆಯಾದರೆ ಮಾತ್ರ ಸರಿಯಾಗುತ್ತದೆ, ಇಲ್ಲದಿದ್ದರೆ, ಅನಾವಶ್ಯಕವಾಗಿ ಕಠಿಣ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗುತ್ತದೆ. ಆದುದರಿಂದ, ದಯಮಾಡಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳಿಗೆ ತಿದ್ದುಪಡಿಗಳನ್ನು ತೆಗೆದುಕೊಂಡು ಬಂದಿದ್ದಾರೆ. ತಿದ್ದುಪಡಿಗಳನ್ನು ತಂದಿರುವಂಥ ಸಂದರ್ಭದಲ್ಲಿ ನಾವು ಅದನ್ನು ಓದಿದಾಗ ಹೊಸ ಶಾಸಕರುಗಳಾಗಿ ನಾವು ಬಂದಿರುವ ಸಂದರ್ಭ ತಮಗೂ ಗೊತ್ತಿದೆ. ಇದನ್ನು ಓದಿದಾಗ ನಮಗೆ ಕೆಲವು ವಿಷಯಗಳು ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಮೊದಲನೆಯದಾಗಿ, ನಾನು ಒಂದು ವಿಷಯ ಹೇಳುತ್ತಿದ್ದೇನೆ. ಏಕೆಂದರೆ, ಇದರ ಹಿನ್ನೆಲೆ ನಮಗೆ ಬೇಕಾಗಿದೆ. ಇವೊತ್ತು ತಾವು ತಿದ್ದುಪಡಿ ತೆಗೆದುಕೊಂಡು ಬಂದಿದ್ದೀರಿ, ಇಲ್ಲಿ ಪ್ರಸ್ತಾವನೆ ಮಾಡಿ ಮಂಡಿಸುತ್ತಿದ್ದೀರಿ. ಇದು ಏಕೆ ಆಗುತ್ತಿದೆಯೆಂದು ನಾವು ಅರ್ಥೈಸುವುದಕ್ಕಾಗುತ್ತಿಲ್ಲ. ಒಂದನ್ನು ನಾನು ಉಲ್ಲೇಖಿಸುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. 1964ರ ಕರ್ನಾಟಕ ಅಧಿನಿಯಮ 5ರ ತಿದ್ದುಪಡಿಯ (ಎ) (ಎ)ನಲ್ಲಿ 'ಉಪ ಖಂಡದಲ್ಲಿ ಕೋಕೋ ಬೀಜಗಳು ಅಥವಾ ಕಾಯಿ' ಎಂಬ ಪದಗಳನ್ನು ಬಿಟ್ಟು ಬಿಡತಕ್ಕದು? ಎಂದಿದೆ. ಇದನ್ನು ಬಿಡಬೇಕಾದರೆ ಕಾರಣವೇನು? ಮತ್ತೆ (ಎ)ರಲ್ಲಿ ಕೋಕೋ ಬೀಜಗಳು ಮತ್ತು ಕಾಯಿಗಳು, ಗ್ಯಾರಸಿನಾ ಹಣ್ಣುಗಳು, ಮುಳ್ಳುರಹಿತ ಬಿದಿರು, ಹಾಲ್ಮಡ್ಡಿ, ರಾಲ್‌ಧೂಪ ಮತ್ತು ಕೈಧೂಪ' ಬಿಟ್ಟ ನಂತರ ಮತ್ತೆ ಇಷ್ಟನ್ನೂ ಸೇರಿಸುವಂಥ ಅವಶ್ಯಕತೆ ಏನಿತ್ತು? ಅದನ್ನು ನಮಗೆ ಹೇಳಬೇಕು. ಏಕೆಂದರೆ ನಾವು ಹೊಸ ಸದಸ್ಯರಿದ್ದೇವೆ. ಏತಕ್ಕೋಸ್ಕರ ಬಿಡುತ್ತಿದ್ದೀರಿ.

ಮತ್ತೇ ಅದರ ಜೊತೆಗೆ ಇನ್ನೊಂದಿಷ್ಟನ್ನು ಏತಕ್ಕೋಸ್ಕರ ಸೇರಿಸುತ್ತಿದ್ದೀರಿ. ಅದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಇವತ್ತು ಖಂಡ ಖಂಡದಲ್ಲಿ ನಾವು ಹಾಕುತ್ತೇವೆಂದರೆ ನಾವು ಅದಕ್ಕೆ ಸರಿ ಎಂದರೆ ಸರಿ ಎಂದು ಹೇಳುತ್ತೇವೆ. ಇಲ್ಲ ಎಂದರೆ ಇಲ್ಲವೆಂದು ಹೇಳುತ್ತೇವೆ. ಅದು ನಮಗೆ ಅರ್ಥವಾಗಬೇಕಲ್ಲಾ. ಅದೇ ರೀತಿಯಲ್ಲಿ ಜಂಟಿ ಅರಣ್ಯ ಯೋಜನೆ ಮತ್ತು ಅರಣ್ಯ ವ್ಯವಸ್ಥಾಪನೆಗಾಗಿ ಗ್ರಾಮ ಅರಣ್ಯ ಸಮಿತಿಯನ್ನು ರಚನೆ ತಾವು ಮಾಡಿದ್ದೀರಿ. ಇಲ್ಲಿ ಒಂದು ಮಾತನ್ನು ನೊಂದುಕೊಂಡು ಹೇಳಬೇಕಾಗಿದೆ. ಸಮಿತಿಗೆ ಚುನಾವಣೆಗಳನ್ನು ನಡೆಸುವುದು. ಹಾಗಾದರೆ ಇದನ್ನೂ ಕೂಡ ಒಂದು ರಾಜಕೀಯ ಸಂಸ್ಥೆಯನ್ನಾಗಿ ಮಾಡುವುದಕ್ಕೆ ಹೊರಟಿದ್ದೀರಿ. ಏಕೆ ನಾನು ಈ ರೀತಿ ಉಲ್ಲೇಖ ಮಾಡುತ್ತಿದ್ದೇನೆಂದರೆ ಅಲ್ಲಿ ಚುನಾವಣೆಯಲ್ಲಿ ಸ್ಪರ್ಧೆ ಮಾಡುವವರು ಆದಾಯ ಇದ್ದರೆ ಮಾತ್ರ ಸ್ಪರ್ಧೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದಾಯ ಬರುವಂತಹ ಒಂದು ವ್ಯವಸ್ಥೆಯನ್ನು ಅವರು ಮಾಡಿಕೊಳ್ಳುತ್ತಾರೆ. ಆದುದರಿಂದ ಇದರ ಬಗ್ಗೆ ದಯವಿಟ್ಟು ಪರಿಶೀಲನೆ ಮಾಡಬೇಕು. ಈ ಚುನಾವಣೆ ಎನ್ನುವಂತಹ ಪದಗಳನ್ನು ಬಿಡಬೇಕು. ವ್ಯವಸ್ಥಿತ ರೀತಿಯಲ್ಲಿ ಪರಿಸರದ ಬಗ್ಗೆ ಯಾರಿಗೆ ಒಲವು ಇದೆ ಅಂತಹವರನ್ನು ಆ ಸಮಿತಿಗಳಲ್ಲಿ ಸೇರಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಹಾಗೆ ಪುಟ ಸಂಖ್ಯೆ 3ರಲ್ಲಿ, ಈಗಿರತಕ್ಕ ಮರ ಕೊಯ್ಯುವ ಗುಂಡಿ ಎಂಬ ಪದಗಳ ತರುವಾಯ ಮರ ಕೊಯ್ಯುವ ಹೊಸ ಗುಂಡಿಗಳನ್ನು ಪ್ರಾರಂಭಿಸುವುದು ಎಂಬ ಪದಗಳನ್ನು ಸೇರಿಸತಕ್ಕದ್ದು. ಅದರ ಜೊತೆಗೆ ನೀವು ಇದನ್ನು ಸೇರಿಸಬೇಕಾದ ಅನಿವಾರ್ಯತೆ ಏನು ಬಂತು? ಈಗ ತಾವು ತಿದ್ದುಪಡಿ ತೆಗದುಕೊಂಡು ಬಂದಿದ್ದೀರಿ. ಆ ತಿದ್ದುಪಡಿ ಬಗ್ಗೆ ಇಲ್ಲಿಗೆ ಬರುವಾಗ ಎಲ್ಲರೂ ಅರಣ್ಯ ಕಾಯಿದೆಯನ್ನು ಓದಿಕೊಂಡು ಬಂದು ಕುಳಿತುಕೊಂಡಿಲ್ಲ. ಇದಕ್ಕೆ ಒಂದು ಪೂರ್ವ ಇತಿಹಾಸ ಇದೆ. ಇಲ್ಲವೆಂದು ಹೇಳುವುದಿಲ್ಲ. ಆ ಹಿನ್ನೆಲೆಯನ್ನೂ ಕೂಡ ನಮಗೆ ಒದಗಿಸಿದರೆ ಬಹುಶಃ ಚರ್ಚೆಗೆ ಒಂದು ಒಳ್ಳೆಯ ವಸ್ತುವಾಗುತ್ತಿತ್ತು. ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಅದರ ಬಗ್ಗೆ ಸಲಹೆ ಕೊಡುವುದಕ್ಕೆ ಅನುಕೂಲವಾಗುತ್ತಿತ್ತೆಂದು ಮಾನ್ಯ ಮಂತ್ರಿಗಳಲ್ಲಿ ಹೇಳುತ್ತಿದ್ದೇನೆ. ಇನ್ನೊಂದು ವಿಚಾರವೇನೆಂದರೆ ಇದೇ ಪುಟದಲ್ಲಿ ಪಿ (ಎ) ಖಂಡದಲ್ಲಿ ದಂತ ಎಂಬ ಪದದ ನಂತರ, ಅಂದರೆ ದಂತ ಎನ್ನುವುದು ತಮಗೆ ಗೊತ್ತಿದೆ. ಆದರೆ ಅದರ ನಂತರ ಹುಲ್ಲುಮಾವು ತೊಗಟೆ ಅದನ್ನೂ ಕೂಡ ಅದರ ಜೊತೆಗೆ ಸೇರಿಸಬೇಕು ಎಂದರೆ ಬಹುಶಃ ಅವರ ಉದ್ದೇಶ ನನಗೆ ಅರ್ಥವಾಗುತ್ತದೆ. ಆ ದಂತದ ಬಗ್ಗೆ ಯಾರು ಕಳುವು ಮಾಡುತ್ತಿದ್ದಾರೋ ಆ ಉದ್ದೇಶದಿಂದ ಇರಬೇಕೆಂದು ನಾನು ಅಂದುಕೊಂಡಿದ್ದೇನೆ. ಅದರ ಜೊತೆಗೆ ಈ ಒಂದು ಕಳ್ಳಸಾಗಾಣಿಕೆ ಮಾಡುವಂತಹವರಿಗೆ ದಾಲ್ಚಿನಿ ತೊಟಗೆ, ಹಾಲಮಡ್ಡಿ ಮಾಡುವವರನ್ನು ದಂತದ ಕಳ್ಳರ ಜೊತೆ ಸೇರಿಸುವಂತಹ ಪ್ರಯತ್ನ ಮಾಡುತ್ತಿರುವುದು ಸಾಧ್ಯವೇ? ಅದನ್ನೂ ಕೂಡ ವಿಮರ್ಶೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕೊನೆಯದಾಗಿ ಪುಟ ಸಂಖ್ಯೆ 22ರಲ್ಲಿ 3ನೆಯದು, ಅರ್ಜಿಯು ಬಂದ ತರುವಾಯ ಮರಗಳ ಅಧಿಕಾರಿಯು ಮರಗಳನ್ನು ಪರಿಶೀಲಿಸಿ ಮತ್ತು ಅವಶ್ಯವೆಂದು ಭಾವಿಸಬಹುದಾದಂತಹ ತನಿಖೆಯನ್ನು ನಡಿಸಿದ ತರುವಾಯ ಪೂರ್ಣವಾಗಿ ಅಥವಾ ಭಾಗಶಃ ಅನುಮತಿಯನ್ನು ಕೊಡಬಹುದು ಅಥವಾ ಅನುಮತಿಯನ್ನು ನಿರಾಕರಿಸಬಹುದು. ಇದು ಬಹಳ ವೇಗ್ ಆಗಿ ಇದೆ. ಈಗ ಅವನ ಮೇಲೆ ನಿರ್ದಿಷ್ಟವಾದಂತಹ

ಒಂದು ಕಡಿವಾಣವನ್ನು ಹಾಕುವಂತಾದ್ದು ನೀವು ಹೇಳಿ. ಅವನಿಗೆ ಈ ರೀತಿ ಡಿಸ್ಕ್ರಿಷನ್ ಕೊಟ್ಟರೆ ಮತ್ತೆ ಲಂಚದ ಹಾವಳಿ ಜಾಸ್ತಿಯಾಗುತ್ತದೆ. ನಂತರ ಅದರ ಮುಂದಿನ ಪುಟದಲ್ಲಿ ಏನು ಬರೆದಿದ್ದೀರಿ. ಪರಂತು ಕೆಳಕಂಡ ಸಂದರ್ಭಗಳಲ್ಲಿ ಮರವನ್ನು ಕಡಿಯಲು ಅನುಮತಿಯನ್ನು ನಿರಾಕರಿಸತಕ್ಕದ್ದಲ್ಲ. ಮೇಲುಗಡೆ ಅನುಮತಿಯನ್ನು ಕೊಡಬಹುದು ಎಂದು ಹೇಳುತ್ತೀರಿ. ಆದರೆ ಅದರ ಕೆಳಗಡೆ ಅನುಮತಿಯನ್ನು ನಿರಾಕರಿಸತಕ್ಕದ್ದು ಎಂದು ಹೇಳುತ್ತೀರಿ. ಕೆಲವು ಯಾವುದಿದೆ, ಮರ ಒಣಗಿ ಹೋಗಿದ್ದರೆ, ಇದನ್ನೂ ಕೂಡ ಆತನೇ ತೀರ್ಮಾನ ಮಾಡಬೇಕು. ಈ ಒಂದು ಉಲ್ಲೇಖ ಮಾಡಿರುವಂತಹ 5 ಐಟಂ ಇದೆಯಲ್ಲಾ, ಅದನ್ನು ಆ ಅರಣ್ಯ ಅಧಿಕಾರಿಯೇ ತೀರ್ಮಾನ ಮಾಡಬೇಕಾಗಿದೆ. ಆದುದರಿಂದ ಇಲ್ಲಿ ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ ನಿರ್ದಿಷ್ಟವಾಗಿ ಅಧಿಕಾರಿಗೆ ಜವಾಬ್ದಾರಿಯನ್ನು ವಹಿಸಿ. ಈ ರೀತಿ ಮಾಡಬೇಕೆಂದು ಹೇಳಿ. ಈ ರೀತಿ ಡಿಸ್ಕ್ರಿಷನ್ ಕೊಡುವುದರಿಂದ ಏನಾಗತ್ತದೆಂದರೆ ಲಂಚದ ಹಾವಳಿ ಜಾಸ್ತಿಯಾಗುತ್ತದೆ. ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಅರಣ್ಯ ಸಮಿತಿ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ.

ಉಪಾಧ್ಯಕ್ಷರು : ಈಗಾಗಲೇ ಸದಸ್ಯರೆಲ್ಲಾ ಏನು ವಿಚಾರಗಳನ್ನು ಹೇಳಿದ್ದಾರೆ, ಅದನ್ನು ಬಿಟ್ಟು ಬೇರೆ ವಿಚಾರ ಹೇಳಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಈ ಅರಣ್ಯ ಸಮಿತಿ ಅವಶ್ಯಕತೆಯನ್ನು ನಾನು ಪ್ರಶ್ನಿಸುತ್ತಿದ್ದೇನೆ. ಇದು ಏಕೆ ರಚನೆಯಾಗಬೇಕು? ಯಾವುದೇ ಒಂದು ಸಮಿತಿಯನ್ನು ರಚನೆ ಮಾಡಿದರೆ ಅದಕ್ಕೆ ಜೀವವನ್ನು ತುಂಬುವುದು ಆ ಸಮಿತಿಯ ಉದ್ದೇಶ. ಅದನ್ನು ಮಾಡಬೇಕಾದವರು ಯಾರು? ಯಾರಾದರೂ ಇದ್ದಾರೆ ಎಂದರೆ ಅರಣ್ಯ ಇಲಾಖೆಯವರು. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಪರಿಸರದಲ್ಲಿ ಅರಣ್ಯ ಸಮಿತಿಯನ್ನು ಮಾಡಿದರು. ಅದೇ ರೀತಿ ನಾರ್ತ್ ಕೆನರಾದಲ್ಲಿ ಸಹ ಅರಣ್ಯ ಸಮಿತಿಯನ್ನು ಮಾಡಿದರು. ಹಾಗೂ ಶಿವಮೊಗ್ಗದಲ್ಲಿ ಮಾಡಿದರು ಎನ್ನುವ ಮಾತನ್ನು ಹೇಳಿದರು. ಹಾಗಾದರೆ ಅರಣ್ಯ ಸಮಿತಿಗಳು ಮಾಡಿದಮೇಲೆ ಅವು ಸಮರ್ಪಕವಾಗಿ ಕೆಲಸ ಮಾಡದೇ ಇರುವಂತಹ ಪರಿಸ್ಥಿತಿ ಹೇಗೆ ನಿರ್ಮಾಣವಾಯಿತು? ಬಹುಶಃ ಅಧಿಕಾರಿ ವಿಕೇಂದ್ರಿಕರಣಕ್ಕೆ ಯಾವ ಅಧಿಕಾರಿಗಳೂ ಒಪ್ಪುವುದಿಲ್ಲ. ನೀವೇನು ಕಾನೂನು ಮಾಡುತ್ತೀರಿ, ಆ ಕಾನೂನು ಪ್ರಕಾರ ಅಧಿಕಾರಿ ಪ್ರತಿಯೊಂದು ಸಭೆ ಕರೆಯುವುದರಲ್ಲಿ ಏನೇ ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಕೊನೆಯಲ್ಲಿ ತೀರ್ಮಾನ ತೆಗೆದುಕೊಳ್ಳುವವನೇ ಅಧಿಕಾರಿ. ಅರಣ್ಯ ಇಲಾಖಾ ಅಧಿಕಾರಿಗಳ ಮರ್ಜಿನ ಮೇಲೆ ಸಮಿತಿ ನಡೆಯುತ್ತಿದೆ. ಇದೆಲ್ಲಾ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕಂಥ ಗೈಡ್‌ಲೈನ್ಸ್ ಅಡಿಯಲ್ಲಿ ಈ ಒಂದು ಕಾಯಿದೆಯನ್ನು ತಾವು ಮಾಡಬೇಕೆನ್ನುವ ಇಚ್ಛೆಯನ್ನು ವ್ಯಕ್ತಪಡಿಸಿದ್ದೀರಿ. ಬಹುಶಃ ಇದೇ ಒಂದು ಒಳ್ಳೆಯ ಉದ್ದೇಶದಿಂದ ಅರಣ್ಯ ಸಮಿತಿ ರಚನೆಯಾಯಿತು. ಅರಣ್ಯ ವಲಯ ಅಧಿಕಾರಿ ಊರಿನಲ್ಲಿ ಎಲ್ಲರನ್ನೂ ಬರುವುದಕ್ಕೆ ಹೇಳಿದರು. ಅದರ ಕಾರ್ಯದರ್ಶಿ ಫಾರೆಸ್ಟರ್

ಆಗಿರುತ್ತಾರೆ. ಅವರು ಏನು ಮಾಡುತ್ತಾರೆಂದರೆ ಬಹುಶಃ ಯಾರಾದರೂ ಕಷ್ಟದಲ್ಲಿ ಇರುವವರಿಗೆ ಬಿದ್ದಿರತಕ್ಕಂಥ ಮರಗಳನ್ನು ಮನೆ ಕಟ್ಟುವುದಕ್ಕೆ ಕೊಡುತ್ತೇವೆ, ನಿಮಗೆ ಏನಾದರೂ ಉಪಯೋಗಕ್ಕೆ ಕೊಡುತ್ತೇವೆ ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಮಾಡಿದರೆ ಮಾತ್ರ ಸಮಿತಿ ರಚನೆ ಆಗುತ್ತದೆಯೇ ಹೊರತು ಅರಣ್ಯ ಕಾಯುವುದಕ್ಕೆ, ಅರಣ್ಯವನ್ನು ಬೆಳೆಸುವುದಕ್ಕೆ ಎನ್ನುವ ಉದ್ದೇಶ ಇದರಲ್ಲಿ ಕಾಣುತ್ತಾ ಇಲ್ಲ. ಆ ಹಿನ್ನೆಲೆ ಇದ್ದರೂ ಸಹ ಅದನ್ನು ಸಮರ್ಪಕವಾಗಿ ಆಗದೇ ಇರುವುದನ್ನು ನಾವು ಕಾಣುತ್ತಿದ್ದೇವೆ. ಆದುದರಿಂದ ಈ ಅರಣ್ಯ ಸಮಿತಿಯ ಉದ್ದೇಶ ಏನು ಇಟ್ಟುಕೊಂಡಿದ್ದೇವೆ, ಇದು ಇಷ್ಟರವರೆಗೆ ಎಲ್ಲಾದರೂ ಸಮರ್ಪಕವಾಗಿ ಕೆಲಸ ಮಾಡಿದ ನಿದರ್ಶನಗಳು ಇದ್ದರೆ ಅದನ್ನು ಹೇಳಬೇಕೆಂದು ನಾನು ಕೇಳುತ್ತಿದ್ದೇನೆ. ಉದಾಹರಣೆಗಳು ಇಲ್ಲ. ಯಾರೋ ಒಬ್ಬರು ಡಿ.ಎಫ್.ಓ. ಬಂದಾಗ 50 ಅರಣ್ಯ ಸಮಿತಿ ಸಭೆಗಳು ಆಯಿತು. ಅದೇ ಪ್ರಥಮ, ಅದೇ ಕೊನೆ. ನಂತರ ಯಾವುದೇ ಕೆಲಸಗಳನ್ನು ಮಾಡಿರುವಂತಹ ಉದ್ದೇಶ ಇಲ್ಲ. ಮತ್ತು ಅರಣ್ಯ ಸಮಿತಿ ಅಧ್ಯಕ್ಷರು ಎನ್ನತಕ್ಕಂಥವರು ಯಾರನ್ನೋ ಒಬ್ಬರನ್ನು ಆಯ್ಕೆ ಮಾಡುತ್ತಾರೆ. ಅವರ ಮರ್ಜಿಗೆ ಅದು ಹೋಗುತ್ತದೆ. ಹೋದಾಗ ಇಲಾಖೆಯ ಅಧಿಕಾರಿಗಳಿಗೆ ಮತ್ತು ಅವರಿಗೆ ಭಿನ್ನಾಭಿಪ್ರಾಯ ಬರುತ್ತದೆ. ಈ ರೀತಿ ಆಗತಕ್ಕಂಥ ಪರಿಸ್ಥಿತಿಗಳನ್ನು ನಾವೇ ಸ್ವತಃ ನೋಡತಕ್ಕಂಥ ಸಂದರ್ಭ ಕಾಣುತ್ತಿದ್ದೇವೆ. ಇವತ್ತು ಅರಣ್ಯ ಸಮಿತಿಯ ಅರ್ಹತೆ ಮತ್ತು ಅನರ್ಹತೆಗಳನ್ನು ಮಾಡಿ ಕೆಲವೊಂದು ವಿಚಾರಗಳನ್ನು ಇಟ್ಟಿದ್ದೀರಿ. ಅದನ್ನು ಕಾದು ನೋಡೋಣ. ಏಕೆಂದರೆ ನಾನು ಆ ಕಡೆ ಕುಳಿತುಕೊಂಡಿದ್ದೆ. ನಿಮ್ಮ ಪಕ್ಷದವರೇ ಒಂದು ಸಾರಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಏನೇ ಮಾಡಬೇಕಾದರೂ ಆಲೋಚನೆ ಮಾಡಿ ಮಾಡಬೇಕೆಂದು ಹೇಳಿದರು. ಕೆಲವರು ಮಾಡಿ ಆಲೋಚನೆ ಮಾಡುತ್ತಾರೆ. ಮಾನ್ಯ ಚಂದ್ರೇಗೌಡರು ಇಲ್ಲಿ ಕುಳಿತುಕೊಂಡಂತಹ ಸಂದರ್ಭದಲ್ಲಿ ಯಾವುದೋ ಒಂದು ಕಾಯಿದೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದರು.

ಶ್ರೀ ಎಂ.ಸಿ. ನಾಣಯ್ಯ : ನಾವು ಆಲೋಚನೆ ಮಾಡಿಯೇ ತರುತ್ತಿದ್ದೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನನಗೆ ಏನು ಅನಿಸುತ್ತದೆಂದರೆ ನೀವು ಕಾಯಿದೆಯನ್ನು ತಂದಿದ್ದೀರಿ. ಆಲೋಚನೆ ಕೊನೆಗೆ ಮಾಡುತ್ತೀರಿ. ಬಹುಶಃ ಅದರ ಬಗ್ಗೆ ಟೀಕೆ ಬರುತ್ತದೆ. ಬಹಳಷ್ಟು ಟೀಕೆಗಳನ್ನು ನಾವು ಎದುರಿಸುತ್ತಿದ್ದೇವೆ. ನಾನು ಕೇಳಿರತಕ್ಕಂಥ ವಿಚಾರಗಳಿಗೆ ಸ್ಪಷ್ಟೀಕರಣ ಹೇಳುವುದಾದರೆ ನನ್ನ ಆಕ್ಷೇಪ ಇಲ್ಲ. ವಸ್ತುಸ್ಥಿತಿ ಯಾವುದೇ ಒಂದು ಸಮಿತಿ ಮೂಲ ಉದ್ದೇಶ ಏಕೆ ಹುಟ್ಟಿಕೊಂಡಿದೆ? ಹೇಗೆ ನಡೆಸಿಕೊಂಡು ಹೋಗಬೇಕಾಗಿದೆ? ಹೇಗೆ ಅದರ ಪ್ರಯೋಜನ ಸಿಗುತ್ತದೆ? ಅರಣ್ಯ ಇಲಾಖೆಗೆ ಏನು ಪ್ರಯೋಜನ? ನಮ್ಮ ದೇಶಕ್ಕೆ ಏನು ಉಪಯೋಗವಾಗುತ್ತದೆ ಎನ್ನುವ ವಿಚಾರಗಳಿಂದ ಕೂಡಿರಬೇಕೇ ಹೊರತು ಇವತ್ತು ಅಧಿಕಾರಿ ಮರ್ಜಿನಿಂದ ಆಗತಕ್ಕಂಥ ಅರಣ್ಯ ಸಮಿತಿಗಳು ಅದು ಒಳ್ಳೆಯ ಪ್ರಯೋಜನಕಾರಿಯಾಗುವುದಿಲ್ಲ. ಇನ್ನೊಂದು ವಿಚಾರ ಇದರಲ್ಲಿ ಇರುವ ಹಾಗೆ ಮಾನ್ಯ ಅರಗ ಜ್ಞಾನೇಂದ್ರ ಹೇಳಿದಂತೆ ವಶಪಡಿಸಿಕೊಂಡಂತಹ ಸ್ವತ್ತುಗಳನ್ನು ಬ್ಯಾಂಕ್ ಗ್ಯಾರಂಟಿ ಮುಖಾಂತರ ಬಿಡುಗಡೆ ಮಾಡಬಹುದು ಇದು ಇಲ್ಲೀಗಲ್ ಅನ್ನೂ ರೆಗ್ಯುಲರೈಸ್ ಮಾಡುವುದಕ್ಕೆ ಒಂದು ವ್ಯವಸ್ಥೆ ಎಂಬುದು ನನ್ನ ಭಾವನೆ. ಏಕೆಂದರೆ ಅರಣ್ಯ ಇಲಾಖೆ ಯಾವುದೇ ತಕ್ಸೀರನ್ನು ಗ್ಯಾರಂಟಿ ಮೇಲೆ

ಬಿಡುಗಡೆ ಮಾಡುವುದಾದರೆ ಎಷ್ಟಕ್ಕಾದರೂ ಇರಲಿ ಎಂದು ಹೇಳುತ್ತಾನೆ. ಇವರು ಮಾಡಿರತಕ್ಕಂಥ ಅಪರಾಧಗಳನ್ನು ಸಕ್ರಮಗೊಳಿಸುವುದಕ್ಕೆ ಅದನ್ನು ಆತನು ಬಿಡುಗಡೆಗೊಳಿಸುವುದಕ್ಕೆ ಅನುಕೂಲವಾಗುತ್ತದೆ ಎಂಬುದು ನನ್ನ ಭಾವನೆ. ಚರ್ಚೆ ಮಾಡಿದರೆ ಗೊತ್ತಾಗುತ್ತದೆ. ಇನ್ನೊಂದು ಸಂದರ್ಭದಲ್ಲಿ ಹೇಳುತ್ತೇನೆ, ಎಷ್ಟೋ ಇಂತಹ ಪ್ರಕರಣಗಳು ಆಗಿದೆ. ರಿಲೀಸ್ ಮಾಡುವುದಕ್ಕೆ ಗ್ಯಾರಂಟಿ ಕೊಟ್ಟರೆ ಆಯಿತು. ಅರಣ್ಯ ಇಲಾಖೆ ಯಾವುದೇ ಲಾರಿ ಹಿಡಿದರೆ ಬ್ಯಾಂಕ್ ಗ್ಯಾರಂಟಿ ಕೊಟ್ಟು ರಿಲೀಸ್ ಮಾಡಿಕೊಂಡು ಹೋಗಬಹುದು. ಪ್ರತಿಯೊಂದು ಪ್ರಕರಣಗಳಲ್ಲಿ ಇದರ ರಕ್ಷಣೆಯಡಿಯಲ್ಲಿ ಅಕ್ರಮಗಳು ಸಕ್ರಮ ಆಗುವಂತಹ ಸಾಧ್ಯತೆಗಳನ್ನು ನಾವು ಕಾಣುತ್ತಿದ್ದೇವೆ. ಮತ್ತೊಂದು ರಾಜೀ ಮಾಡಿಕೊಳ್ಳುವಂಥಾದ್ದು ಐದು ಸಾವಿರ ರೂಪಾಯಿಗಳಿಂದ ಐವತ್ತು ಸಾವಿರ ರೂಪಾಯಿಗಳಿಗೆ ಮಾಡಿರುವಂಥಾದ್ದು, ಈ ಅಪರಾಧಿಗಳೊಂದಿಗೆ ರಾಜೀ ಮಾಡಿಕೊಳ್ಳುವಂಥಾದ್ದು ಏಕೆ ಎಂಬುದು ನನಗೆ ಗೊತ್ತಿಲ್ಲ, ಅದನ್ನು ತಾವು ಹೇಳಬೇಕು.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಕಾಂಪೌಂಡಿಂಗ್ ಎನ್ನುವಂಥಾದ್ದು.....

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಈ ಕಾಂಪೌಂಡಿಂಗ್ ಎಂದು ಹೇಳುತ್ತಿರುವಂಥಾದ್ದು ಇಲ್ಲಿ ಅಪರಾಧ ಮಾಡಿರುವಂಥವರ ಹತ್ತಿರ ರಾಜೀ ಏಕೆ? ಒಂದು ವೇಳೆ ಮಾಡಿರುವಂತಹ ಸ್ವತ್ತನ್ನು ಸ್ವಾಧೀನ ಪಡಿಸಿಕೊಂಡು ಅದಕ್ಕೆ ಐದು ಸಾವಿರ ರೂಪಾಯಿಗಳ ದಂಡವನ್ನು ಮಾಡುವುದು ಇದೆ. ಆದರೆ ಮಾಡಿರುವಂತಹ ಸ್ವತ್ತನ್ನು ಅವರಿಗೆ ಕೊಟ್ಟು 50 ಸಾವಿರ ರೂಪಾಯಿಗಳ ರಾಜಿ ಮಾಡಿಕೊಳ್ಳುವಂಥಾದ್ದು ವ್ಯವಹಾರಕ್ಕೆ ದಾರಿಯಾಗುತ್ತದೆ. ಇದರ ಬಗ್ಗೆ ನಿಮ್ಮ ಅನಿಸಿಕೆ ಇದ್ದರೆ ಹೇಳಿ.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಈಗ ಮ್ಯಾಗ್ಜಿಮಮ್ ಐವತ್ತು ಸಾವಿರ ರೂಪಾಯಿಗಳು ಮಾಡಬೇಕೆಂದು ತಿದ್ದುಪಡಿ ಇದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವಂಥಾದ್ದು ಈ "ರಾಜೀ" ಎನ್ನುವಂಥ ಪದ ಏಕೆ? ಅರಣ್ಯ ಅಪರಾಧಗಳು ಎಂದರೆ ಮರಗಳನ್ನು ಕಡಿದಿದ್ದಾರೋ, ಸಾಗಾಟ ಮಾಡಿದ್ದಾರೋ ಅಥವಾ ಅದರ ಉತ್ಪನ್ನಗಳನ್ನು ಸಾಗಾಟ ಮಾಡಿದ್ದರೆ ಆ ಸ್ವತ್ತನ್ನು ವಶಪಡಿಸಿಕೊಂಡು ಅದರ ಮೇಲೆ ಫೈನ್ ಹಾಕುವಂಥಾದ್ದನ್ನು ಬಿಟ್ಟರೆ ಅದಕ್ಕೆ ಐವತ್ತು ಸಾವಿರ ರೂಪಾಯಿಗಳ ರಾಜಿ ಮಾಡುವಂತಹ ವ್ಯವಸ್ಥೆ ಏನು ಎಂಬ ಪ್ರಶ್ನೆಯನ್ನು ನಾನು ಮಾಡುತ್ತಿದ್ದೇನೆ. ಇನ್ನು ಮತ್ತೊಂದು ವಿಚಾರ ನಮ್ಮ ಸ್ನೇಹಿತರಾದ ಶ್ರೀ ಅರಗ ಜ್ಞಾನೇಂದ್ರ, ತೀರ್ಥಹಳ್ಳಿ ಶಾಸಕರು ಹೇಳಿದರು. "ಹುಲ್ಲೆಣ್ಣೆ" ಮೇಲೆ ನಿಮಗೆ ಕಣ್ಣು ಬಿದ್ದಿದೆ. ಇದನ್ನು ನೆಟ್ಟು, ಬೆಳಸಿ, ಅದನ್ನು ಎಣ್ಣೆ ಮಾಡಿದರೆ ನಿಮ್ಮ ದೃಷ್ಟಿಯಲ್ಲಿ ಅದು ಅಪರಾಧವಾಗುತ್ತದೆ. ನಾನು ಇದರ ಬಗ್ಗೆ ನೇರವಾಗಿ ನಿಮ್ಮನ್ನು ಪ್ರಶ್ನೆ ಮಾಡಲಿಚ್ಛಿಸುತ್ತೇನೆ. ಹೆಂಚಿನ ಕಾರ್ಖಾನೆಯವರು ಮಣ್ಣನ್ನು ಉಪಯೋಗಿಸಿಕೊಂಡು ಅದನ್ನು ಹೆಂಚಾಗಿ ಪರಿವರ್ತಿಸಲು ಕಟ್ಟಿಗೆಯನ್ನು ಉಪಯೋಗಿಸಿಕೊಂಡು ಮಾಡುತ್ತಾರೆ. ಅದು ಶಿಕ್ಷಾರ್ಹ ಅಪರಾಧವಲ್ಲ, ಅದೇ ರೀತಿಯಲ್ಲಿ

ಇಟ್ಟಿಗೆಯನ್ನು ಮಾಡಲು ಕಟ್ಟಿಗೆಯನ್ನು ಉಪಯೋಗಿಸಿಕೊಂಡು ಅದನ್ನು ಸುಟ್ಟು ಇಟ್ಟಿಗೆ ಮಾಡುತ್ತಾರೆ, ಇದು ಶಿಕ್ಷಾರ್ಹ ಅಪರಾಧವಲ್ಲ. ಆದರೆ ಹುಲ್ಲೆಣ್ಣೆಯನ್ನು ಭಟ್ಟಿ ಇಳಿಸಿ ಎಣ್ಣೆ ಮಾಡಿದರೆ ಅದು ಪಟ್ಟಾ ಸ್ಥಳಗಳಲ್ಲಿ ಆಗಲಿ, ಖಾಸಗಿ ಸ್ಥಳಗಳಲ್ಲಿ ಮಾಡಿದರೆ ಅದು ಶಿಕ್ಷಾರ್ಹ ಅಪರಾಧವೆಂದು ಅರಣ್ಯ ಉತ್ಪನ್ನವೆಂದು ನೀವು ದಾಖಲೆಯಲ್ಲಿ ಹೇಗೆ ಹಾಕುವುದಕ್ಕೆ ಸಾಧ್ಯವಾಗುತ್ತದೆ? ಇದಕ್ಕೆ ನೀವು ಉತ್ತರವನ್ನು ಕೊಡಬೇಕಾಗುತ್ತದೆ. ನಾವು ಪಟ್ಟಾ ಸ್ಥಳಗಳಲ್ಲಿ ಹುಲ್ಲನ್ನು ಬೆಳೆಸುತ್ತೇವೆ, ಕಟ್ಟಿಗೆಯನ್ನು ತರುತ್ತೇವೆ, ಭಟ್ಟಿ ಇಳಿಸುತ್ತೇವೆ, ಅದನ್ನು ಮಾರಾಟ ಮಾಡುತ್ತೇವೆ. ಅದು ಕಾಡು ಉತ್ಪನ್ನವೆಂದು ಅದಕ್ಕೆ ಪರವಾನಗಿ ಪಡೆಯತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆಯೇ ಎಂಬುದನ್ನು ಕೇಳುವುದಕ್ಕಿಚ್ಛಿಸುತ್ತೇನೆ, ಮತ್ತೆ ಸ್ವತ್ತಿನ ಮೇಲೆ ಮುಟ್ಟುಗೋಲು ಹಾಕುವಂಥಾದ್ದು ಹೇಳಿದ್ದೀರಿ. ಈಗ ಇರುವಂತಹ ಕಾಯಿದೆಗಳ ಪ್ರಕಾರ ಅದರ ಅವಶ್ಯಕತೆ ಇಲ್ಲ. ಅದು ಯಾವುದೇ ಸ್ವತ್ತುಗಳಾಗಲಿ ಅದು ದೋಣಿಯಾಗಲೀ, ವಾಹನಗಳಾಗಲಿ, ಯಾವುದೇ ಸ್ವತ್ತಾಗಲಿ, ಅದನ್ನು ಸ್ವಾಧೀನ ಪಡಿಸಿಕೊಳ್ಳುವಂತಹ ಅಧಿಕಾರ ಅರಣ್ಯ ಇಲಾಖೆಯವರಿಗೆ ಈಗಾಗಲೇ ಇದೆ. ಆ ಅಧಿಕಾರದಿಂದ ಅದನ್ನು ಅವರು ಮುಟ್ಟುಗೋಲು ಹಾಕಿಕೊಳ್ಳಬಹುದು. ಆದುದರಿಂದ ಅದರ ಅವಶ್ಯಕತೆ ಕಾಣುತ್ತಿಲ್ಲ. ತಾವೂ ಸಹ ಇದನ್ನು ಅರಣ್ಯ ಹಿತಾಸಕ್ತಿಯಿಂದ ಮಾಡಿರುವಂಥಾದ್ದು. ಇದನ್ನು ನಾವು ಒಪ್ಪಬೇಕಾಗುತ್ತದೆ. ಇನ್ನು ತಾವು ಅರಣ್ಯಕ್ಕೆ ಪರವಾನಿಗೆ ಕೊಡುತ್ತೀರಿ, ಈ ಪರವಾನಗಿಯನ್ನು ಕೊಡುವಂತಹ ಸಂದರ್ಭದಲ್ಲಿ ಯಾವ್ಯಾವ ಉದ್ದೇಶಕ್ಕೆ ಕೊಡುತ್ತೀರೆನ್ನುವಂಥಾದ್ದು, ಆ ಉದ್ದೇಶಗಳ ಹಿನ್ನಲೆಯಲ್ಲಿ ನೀವು ಪರವಾನಗಿಯನ್ನು ಕೊಡುತ್ತೀರಿ. ನೀವು ಈ ಪರವಾನಗಿಯನ್ನು ಕೊಡುವಂತಹ ವಿಧಾನ ಸರಳೀಕರಣ ಮಾಡಿದರೆ ಅರಣ್ಯ ಉಳಿಯುತ್ತದೆ. ಇವತ್ತು ಕಾಯಿದೆ ಏನು ಹೇಳುತ್ತದೆ ಎನ್ನುವುದಕ್ಕಿಂತ ನಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು ಏನು ಹೇಳುತ್ತಾರೆ, ಅದೇ ಕಾಯಿದೆಯಾಗಿದೆ. ಪಟ್ಟಾ ಸ್ಥಳಗಳಲ್ಲಿ 5 ಮೀಟರ್ ಬಿಡಿ, 2 ಮೀಟರ್ ಬಿಡಿ, 10 ಮೀಟರ್ ಬಿಡಿ ಎನ್ನುವಂತಹ ವಾದವನ್ನು ಮಾಡುತ್ತಾರೆ. ನಾನು ಕೇಳುವಂತಹ ಪ್ರಶ್ನೆಗೆ ನಿಮ್ಮ ಹತ್ತಿರ ಉತ್ತರವಿಲ್ಲ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿರುವಂತಹ ಯಾವುದೇ ಸಾರ್ವಜನಿಕ ಕಟ್ಟಡಗಳು ಅರಣ್ಯ ಇಲಾಖೆಯ ಪರವಾನಗಿಯನ್ನು ಪಡೆದು, ಲೆಸನ್ಸ್ ಪಡೆದು, ಪರ್ಮಿಟ್ ಪಡೆದಿರುವಂತಹ ಕಟ್ಟಡವನ್ನು ತಾವು ತೋರಿಸುತ್ತೀರಾ? ಇಲ್ಲ ಸಂಬಂಧಪಟ್ಟಂತಹ ಇಂಜಿನಿಯರ್ ಮೇಲೆ ರೆಕವರಿ ಹಾಕುತ್ತೀರಾ? ಮಾಡುವವರಿಗೆ ಆ ರೀತಿ ಮಾಡುತ್ತೀರಿ, ಖಾಸಗಿ ಪರವಾನಗಿ ಪಡೆದಿರುವಂತಹ ವ್ಯಕ್ತಿಗಳಿಗೆ ಸತತವಾಗಿ ತೊಂದರೆ ಕೊಡುತ್ತಿರುವುದರಿಂದ ಅವರಲ್ಲಿ ವ್ಯತ್ಯಾಸ ಕಾಣುತ್ತಾ ಇಲ್ಲ. ಪಟ್ಟಾ ಲ್ಯಾಂಡ್‌ನಲ್ಲಿ ಮರ ಕಡಿದರೂ ಒಂದೇ ಆಗುವುದು, ಅರಣ್ಯ ಇಲಾಖೆಗೆ ಹೋಗಿ ಸುರಕ್ಷಿತವಾಗಿ ಕಾಡಿಗೆ ಹೋಗಿ ಮರ ಕಡಿದರೂ ಒಂದೇ ಆಗುವುದು. ಆದುದರಿಂದ ಖಾಸಗಿ ಸ್ಥಳಗಳಲ್ಲಿ ಪರವಾನಗಿಯನ್ನು ಪಡೆಯುವುದಕ್ಕೆ ಎಷ್ಟು ಸರಳೀಕರಣ ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಸರಳೀಕರಣ ಮಾಡಿದರೆ ಅರಣ್ಯ ರಕ್ಷಣೆಯಾಗುತ್ತದೆಯೇ ಹೊರತು, ತಾವು ಏನು ಕಾಯಿದೆ ತರುತ್ತೀರಿ, ಅದರಿಂದ ಅರಣ್ಯ ರಕ್ಷಣೆಯಾಗುವುದಿಲ್ಲ. ಈಗ ಇರತಕ್ಕಂಥ ಕಾಯಿದೆಯಲ್ಲಿ ಪ್ರಾಮಾಣಿಕತೆ ಇದ್ದರೆ, ಅಧಿಕಾರಿಗಳು ಪ್ರಾಮಾಣಿಕತೆಯಿಂದ ಇದ್ದರೆ ಅದನ್ನು ಖಂಡಿತವಾಗಿ ತಡೆಯುವುದಕ್ಕೆ ಸಾಧ್ಯವಾಗುತ್ತದೆನ್ನುವಂತಹ ಮಾತನ್ನು ಹೇಳಲಿಚ್ಛಿಸುತ್ತೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಉಪಾಧ್ಯಕ್ಷರೆ, ನಾನು ವಿಶೇಷವಾಗಿ ಹೆಚ್ಚು ಏನು ಹೇಳುವುದಕ್ಕೆ ಹೋಗುವುದಿಲ್ಲ. ಜಂಟಿ ಅರಣ್ಯ ಯೋಜನೆಯಡಿಯಲ್ಲಿ ಅರಣ್ಯ ಕಾನೂನಿಗೆ ತಿದ್ದುಪಡಿ ತರುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಈಗ ವಸ್ತುಸ್ಥಿತಿಯಲ್ಲಿ ಅರಣ್ಯ ಕಾನೂನು ವ್ಯಾಪ್ತಿಯಲ್ಲಿ ಅದನ್ನು ತರಬಾರದಾಗಿತ್ತು. ಗ್ರಾಮಾಂತರ ಪ್ರದೇಶದಲ್ಲಿ ಅರಣ್ಯ ಬೆಳೆಯುವಂತಹ ವಿಧಾನದಲ್ಲಿ, ಕಾನೂನು ಮಾಡುವಂತಹ ವಿಧಾನದಲ್ಲಿ ಅದನ್ನು ಗ್ರಾಮದ ಜನರು ಸರ್ಕಾರದ ಮಧ್ಯದಲ್ಲಿ ಹಂಚಿಕೆಯಾಗುವಂತಹ ಸಂದರ್ಭದಲ್ಲಿ ಪ್ರತ್ಯೇಕವಾದಂತಹ ಒಂದು ಶಾಸನವನ್ನು ತರಬೇಕಾದಂತಹ ಅಗತ್ಯ ಇವತ್ತು ಇತ್ತು ಏಕೆಂದರೆ ಈ ಜಂಟಿ ಅರಣ್ಯ ಯೋಜನೆಯಲ್ಲಿ ಅರಣ್ಯ ಬೆಳೆಸುವಂಥಾದ್ದು ಅರಣ್ಯ ಇಲಾಖೆಗೆ ಸೇರಿದಂತಹ ಭೂಮಿಯಲ್ಲಿ ಅಲ್ಲ. ಕಂದಾಯ ಇಲಾಖೆಗೆ ಸೇರಿದಂತಹ ಭೂಮಿಯಲ್ಲಿ ಈ ಜಂಟಿ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ, ಎಂದಾಗ ನೀವು ಹಿಂಬಾಗಿಲಿನಿಂದ ಆ ಭೂಮಿಯನ್ನೆಲ್ಲಾ ಪುನಃ ಅರಣ್ಯ ಇಲಾಖೆಗೆ ವಹಿಸುವಂತಹ ಒಂದು ತಂತ್ರವನ್ನು ನೀವು ಮಾಡುತ್ತಿದ್ದೀರಿ. ಇದು ಸರಿಯಾದಂತಹ ಕ್ರಮವಲ್ಲ, ಕಾರಣವೇನೆಂದರೆ ಈ ಜಂಟಿ ಅರಣ್ಯವನ್ನು ಕೋಲಾರದಲ್ಲಿ ಬೆಳೆಯುವುದಕ್ಕೆ ಆಗುವುದಿಲ್ಲ. ಅವನ್ನು ಹೆಚ್ಚಿಗೆ ಮಲೆನಾಡು ಪ್ರದೇಶದಲ್ಲಿ ಬೆಳೆಯತಕ್ಕಂಥಾದ್ದು, ಪ್ರಾರಂಭದಲ್ಲಿ ಅದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದರು, ತದನಂತರ ಶಿವಮೊಗ್ಗ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆ ಜಾರಿಗೆ ಬಂದಿದೆ. ಈ ಯೋಜನೆ ಜಾರಿಗೆ ಬಂದಿದ್ದು ಒಳ್ಳೆಯದಾಗಿದೆ. ನಮ್ಮ ಅನೇಕ ಕಾಡುಗಳು ನಾಶವಾಗುವಂತಹ ಸಂದರ್ಭದಲ್ಲಿ ಗ್ರಾಮದ ಜನರಿಗೆ ಪ್ರೋತ್ಸಾಹ ನೀಡಿ ಅವರ ಸಹಕಾರ ಬಲದಿಂದ ಅವರಿಗೆ ಲಾಭವಾಗುತ್ತದೆನ್ನುವ ಆಸೆಯನ್ನು ಹುಟ್ಟಿಸಿ ಅರಣ್ಯ ಸಂಪತ್ತನ್ನು ವೃದ್ಧಿ ಮಾಡುವಂತಹ ಕೆಲಸ ಇವತ್ತು ಅವಶ್ಯಕವಾಗಿ ಆಗಲೇ ಬೇಕಾಗಿದೆ. ಇತ್ತೀಚಿನ ದಿವಸಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಜನರು ಈ ಯೋಜನೆಯಲ್ಲಿ ಕೆಲಸ ಮಾಡಬೇಕೆಂದು ಮುಂದೆ ಬರುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ ಉರುವಲಿಗಾಗಿ ಸೌದೆ ಬೇಕಾಗುತ್ತದೆ. ಹಿಂದೆ ಎಲ್ಲಿ ಬೇಕಾದರೂ ಸೌದೆ ಸಿಗುತ್ತಿತ್ತು, ಈಗ ಆ ರೀತಿ ಸಿಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ, ನೇಗಿಲು ಮಾಡುವುದಕ್ಕೆ, ಕುಂಟೆ ಮಾಡುವುದಕ್ಕೆ, ಅವರಿಗೆ ಬೇಕಾದಂತಹ ವಸ್ತುಗಳು ಏನು ಇದೆ, ಆ ವಸ್ತುಗಳು ಅವರಿಗೆ ಸಿಗುತ್ತಾ ಇಲ್ಲ. ಆದುದರಿಂದ ಅವರಿಗೆ ಬೇಕಾದಂತಹ ಅಗತ್ಯ ವಸ್ತುಗಳು ಬೇಕೆಂದರೆ ಅವರು ಅರಣ್ಯವನ್ನು ಬೆಳಸಬೇಕೆಂಬ ಮನವರಿಕೆಯಾಗಿದೆ. ಆ ದೃಷ್ಟಿಯಿಂದ ರೈತರು ಮುಂದೆ ಬರುತ್ತಿದ್ದಾರೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಮಲೆನಾಡು ಪ್ರದೇಶಗಲ್ಲಿ ಕಾನುಗಳು ಎಂದು ಇತ್ತು. ಕಂದಾಯ ಇಲಾಖೆಗೆ ಸೇರಿದಂತಹ ಕಾನುಗಳು ಇದೆ. ಹಿಡುವಳಿ ಕಾನುಗಳು ಇದೆ. ಫಾರೆಸ್ಟ್ ಕಾನೂನು ಬಂದಮೇಲೆ ಈ ಹಿಡುವಳಿ ಕಾನೂನೆಲ್ಲಾ ರದ್ದು ಆಗಿ ಇವತ್ತು ಎಲ್ಲಾ ಕಾನ್ ಕರಾಬ್ ಎಂದು ಆಗಿದೆ. ಒಂದು ಕಾಲದಲ್ಲಿ ಇದು ಖಾತೆ ಕಾನು ಆಗಿರಬಹುದು, ಅಥವಾ ಕಂದಾಯ ಇಲಾಖೆಗೆ ಸೇರಿದ ಕಾನು ಆಗಿರಬಹುದು. ನಾವು ಎವರ್ ಗ್ರೀನ್ ಫಾರೆಸ್ಟ್ ಎಂದು ಏನು ಹೇಳುತ್ತೇವೆ. ಅದಕ್ಕಿಂತ ಉತ್ಕೃಷ್ಟವಾದಂಥಾದ್ದು ಆಗ ಇತ್ತು. ಅವು ಏಕೆ ಇದ್ದವೆಂದರೆ ಆ ಕಾನುಗಳೂ ಪ್ರತಿಯೊಂದು ಊರ ಜನರ ಅಥವಾ ಖಾತೆದಾರರಿಗೆ ಸೇರಿದ್ದು, ಅಥವಾ ಈ ಊರಿನವರಿಗೆ ಆ ಭೂಮಿ ಸೇರಿದ್ದು ಆಗುತ್ತಿತ್ತು, ಆಗ ಆ ಊರಿನ ಜನರು

ಅಲ್ಲಿ ಬರುವಂತಹ ಒಣಗಿದ ಎಲೆ, ಜೇನು, ಸೀಗೇಕಾಯಿ, ಸೌದೆ, ಇವುಗಳನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವುದಕ್ಕೆ ಸಂಪೂರ್ಣವಾದ ಹಕ್ಕು ಅವರಿಗೆ ಇತ್ತು. ಅವರು ಮುಳ್ಳನ್ನು ತೆಗೆದುಕೊಂಡು ಬೇಲಿ ಕಟ್ಟುವುದಕ್ಕೆ, ಹಿತ್ತಲಿಗೆ ಬೇಲಿ ಹಾಕಲು ಗೂಟಗಳನ್ನು ತೆಗೆದುಕೊಳ್ಳುವುದಕ್ಕೆ, ನೇಗಿಲಿಗೆ ಬೇಕಾದಂತಹ ಕುಂಟೆಗಳು, ಇನ್ನಿತರ ಸಾಮಾನುಗಳನ್ನು ತೆಗೆದುಕೊಳ್ಳುವುದಕ್ಕೆ ರೈತರಿಗೆ ಪ್ರಿವಿಲೇಜಸ್ ಇತ್ತು. ಹಾಗಾಗಿ ಈ ಕಾನುಗಳು ರಕ್ಷಣೆಯಾಗಿತ್ತು.

7.20 ಪಿ.ಎಂ

ನಮಗೆ ಕಾನುವಿನಲ್ಲಿ ಜೇನು, ಸೀಗೆಕಾಯಿ, ಅಂಟುವಾಳ ಕಾಯಿ ಮುಂತಾದ ಬೇರೆ ಬೇರೆ ವಸ್ತುಗಳು ನಮಗೆ ಸಿಗುತ್ತವೆ ಮತ್ತು ಅದರಿಂದ ಉಪಯೋಗವಾಗುತ್ತದೆ. ಆದರೆ, ಇವೊತ್ತು ಜಂಟಿ ಅರಣ್ಯ ಯೋಜನೆಯಿಂದ ಅವನಿಗೆ ಆಕಾಶ ತೋರಿಸುತ್ತಿದ್ದೀರಿ? ನಿಯಮಾವಳಿಯಲ್ಲಿ 'ಮೆಕಾನಿಸಂ' ಎಂಬ ಒಂದು ಸಣ್ಣ ಪದ ಸೇರಿಸಿದ್ದೀರಿ. ಇದರಲ್ಲಿ ಎಲ್ಲಿದೆ? ಆಕಾಶ ತೋರಿಸುವುದೇ? ನೀವು ಮಾಡುವುದೇನು? ನೀವು ಕಡಿಯುವುದೇನು? ನಿಮ್ಮ ಸರ್ಕಾರಕ್ಕೆ ಏಕೆ ಇವೊತ್ತು ಐವತ್ತು ಭಾಗ ಬೇಕು? ತಾವು ಐವತ್ತು ಭಾಗವನ್ನು ಇಟ್ಟುಕೊಳ್ಳಬೇಡಿ. ನೀವೇನಾದರೂ ಅವರಿಗೆ ಸ್ವಲ್ಪ ಗೊಬ್ಬರ, ಇನ್ನಿತರ ಏನೋ ಕೊಟ್ಟರೆ ಶೇಕಡಾ 10-20ರಷ್ಟು ಇಟ್ಟುಕೊಳ್ಳಿ. ನೂರಕ್ಕೆ ಶೇಕಡಾ 75ರಷ್ಟು ಎಂದರೆ ನೀವು ಮನೆ ಕಟ್ಟುವುದಾದರೆ ಮನೆಗೆ 25 ಗಳ ಸಿಗುತ್ತದೆ, ನೇಗಿಲು ಸಿಗುತ್ತದೆಯೆಂದು ಹೇಳಿದರೆ ಅವರಿಗೆ ಆಸೆ ಬರುತ್ತದೆ. ನನ್ನ ಸ್ವಂತ ಊರಿನಲ್ಲಿ ಅತ್ಯಂತ ಉತ್ಕೃಷ್ಟವಾದ ಕಾಡು ಇತ್ತು, ನಿರ್ನಾಮವಾಯಿತು. ಈಗ ಸುಮಾರು ನೂರು ಎಕರೆ ಪ್ರದೇಶದಲ್ಲಿ ಕಳೆದ ಹದಿನೈದು ವರ್ಷಗಳಿಂದ ನಮ್ಮ ಊರಿನ ಜನರು ಅದನ್ನು ರಕ್ಷಿಸಿದ್ದರಿಂದ ಇವೊತ್ತು ಕಾನು ಇತ್ತು ಎನ್ನುವುದಕ್ಕೆ ಸಾಕ್ಷಿಯಾಗಿದೆ. ನೀವು ಯಾವತ್ತಾದರೂ ಬಂದರೆ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಏಕೆಂದರೆ, ಕಾನುವಿನಲ್ಲಿ ಇದ್ದರೆ ಬಗರ್ ಹುಕುಂ ಸಾಗುವಳಿಗೆ ಕೊಡಬೇಕಾಗುತ್ತದೆ. ಒಂದು ದಿವಸ ಕರೆದುಕೊಂಡು ಹೋಗಿ ತೋರಿಸಿದ ನಂತರ ಒಪ್ಪಲಿಲ್ಲ. ಈಗ ತಾವು ಏನು ಮಸೂದೆ ತಂದಿದ್ದೀರಿ, ಕಾಡು ಇದೆ ಎನ್ನುವುದಕ್ಕೆ ಒಂದು ಸ್ಯಾಂಪಲ್ ಉದಾಹರಣೆ ತೋರಿಸುವುದಕ್ಕಾಗಿ ಇವೊತ್ತು ಉಳಿದಿದೆ, ಊರಿನ ಜನರು ಕಾಯುತ್ತಿದ್ದಾರೆ. ಜೊತೆಗೆ ಕಳೆದ ಎರಡು ವರ್ಷಗಳಿಂದ ನಮ್ಮ ಊರಿನ ಸುತ್ತಲಿನ ಎಲ್ಲಿಯೂ ಕೂಡ ಸೌದೆ ಸಿಗುತ್ತಿಲ್ಲ. ನಮ್ಮ ಮಲೆನಾಡಿನ ಜನರು ನಿಮ್ಮ ಕಡೆಯಿಂದ ಸೌದೆ ತರುವುದಿಲ್ಲ. ಅವರಿಗೆ ಸೌದೆ ನೇರವಾಗಿರಬೇಕು, ಕೊಡಲಿ ಹಾಕಿದರೆ ಸೀಳುವಂತಿರಬೇಕು, ಆ ತರಹದ ಸೌದೆಯನ್ನು ಹುಡುಕುತ್ತಿದ್ದರು. ಆದರೆ, ನಮ್ಮ ಊರಿನ ಜನರು ಮಾವಿನ ಮರ, ಆಲದ ಮರ, ಅರಳಿ ಮರ ಮುಂತಾದುವನ್ನು ನೋಡಿರಲಿಲ್ಲ, ಆ ಮರಗಳ ಸೌದೆಯನ್ನು ಉಪಯೋಗಿಸುತ್ತಿರಲಿಲ್ಲ, ಈಗ ಉಪಯೋಗಿಸುತ್ತಿದ್ದಾರೆ. ಈಗ ಆ ಮರ ಗಳನ್ನು ಬೇರು ಸಹಿತ ಕೀಳಲು ಶುರು ಮಾಡಿದ್ದಾರೆ, ಆ ಪರಿಸ್ಥಿತಿ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಬೇಕಾದರೆ ನಮ್ಮ ಕಡೆಗೆ ಬಂದು ಬಳ್ಳಾರಿ ಜಾಲಿಯನ್ನು ತೆಗೆದುಕೊಂಡು ಹೋಗಿ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಹೇಳಿದೆ ದಯವಿಟ್ಟು ನೀವು ಬಹಳ ಹೊನ್ನು ಕೊಟ್ಟರೂ ನಿಮ್ಮ ಊರಿನಲ್ಲಿ ನಾವು ತಳವೂರುವುದಿಲ್ಲ, ನಾವು ಹಾಗೆ ಇರುವುದಿಲ್ಲ. ನಾವು ಹೇಳುತ್ತೇವೆ: ಅಲ್ಲಿ ಹೇಗೆ ರಾಜ್ಯ ಕಟ್ಟಿಸಿದರೋ? ಅದೇಕೆ ಅಲ್ಲಿಗೆ ಹೋಗಿ ಉಳಿದಿದ್ದರೋ? ನೀರೂ ಇಲ್ಲ, ನೆರಳೂ ಇಲ್ಲ, ಅಂತಹ ಕಡೆ ದೊಡ್ಡ ರಾಜ್ಯ ಕಟ್ಟಿದರು, ಅಲ್ಲಿಗೆ ಜನರು ಹೋಗಿ ಸೇರಿಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗುಲ್ಬರ್ಗಾ ಎಂದರೆ ಅಂಡಮಾನ್, ನಿಕೋಬಾರ್ ದ್ವೀಪಗಳೆಂದು ಅವರು ತಿಳಿದಿರುವಂತೆ ಕಾಣುತ್ತದೆ. ಮಾನ್ಯ ಉಪಾಧ್ಯಕ್ಷರೆ, ತಮಗೆ ಗೊತ್ತಿರುವಂತೆ ಬಹುಮನಿ ಸಲ್ತಾನಾತ್ ಕುತುಬ್‌ಶಾಹಿ ಹೈದರಬಾದ್ ರೂಲ್ ಮಾಡಿದ್ದು ಗುಲ್ಬರ್ಗಾದಲ್ಲೇ, ಆದಿಲ್ ಶಾಹಿ, ಬಿಜಾಪುರ, ಫರಿದ್‌ಶಾಹಿ, ಬೀದರ್ ಅಹಮದ್‌ನಗರ, ಇಂತಹ ದೊಡ್ಡ ರಾಜ್ಯಗಳನ್ನೆಲ್ಲಾ ಆಳಿದವರು ಗುಲ್ಬರ್ಗಾದವರು. ಅಲ್ಲಿ ಹೇಗಿದ್ದೀರಿ ಎಂದರೆ ಅಲ್ಲಿರುವವರು ಮನುಷ್ಯರಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕೋಸ್ಕರ ನಾನು ಒಂದು ಸಲ ಹೇಳಿದೆ. ಇಷ್ಟು ದೊಡ್ಡ ಬಹುಮನಿ ಸಾಮ್ರಾಜ್ಯ ಇಲ್ಲಿ ಬೆಳೆದವಲ್ಲಾ, ಏನನ್ನು ನೋಡಿ ಅವರು ಇಲ್ಲಿಗೆ ಬಂದು ರಾಜ್ಯ ಕಟ್ಟಿದರು? ಕುಡಿಯಲು ನೀರು ಸಿಕ್ಕುವುದಿಲ್ಲ, ಒಳ್ಳೆಯ ಬೆಳೆ ಬೆಳೆಯೋಣವೆಂದರೆ ನೀರಿಲ್ಲ. ಎಲ್ಲಾದರೂ ನೆರಳು ಸಿಗುತ್ತದೆಯೇ ಎಂದರೆ ಮರಗಳೂ ಇಲ್ಲ. ಈ ಬಟಾನ್ ಬಯಲಿನಲ್ಲಿ, ಬರೀ ಗೋರ್ಕಲ್ಲುಗಳಿರುವ ಕಡೆ ಸಾಮ್ರಾಜ್ಯ ಕಟ್ಟಿಕೊಂಡು ಹೋದರೆ ಅವು ಉಳಿಯುತ್ತವೆಯೇ? ಉಳಿಯುವುದಿಲ್ಲ. ಆದುದರಿಂದ, ಇವೊತ್ತು ನಮ್ಮ ಸ್ಥಿತಿ ಏನಿದೆಯೆಂದರೆ, ಮಲೆನಾಡು ಪ್ರದೇಶದಲ್ಲಿ ನಿಜವಾಗಿಯೂ ಕಾಡನ್ನು ಮತ್ತೆ ಅಭಿವೃದ್ಧಿಗೆ ತರಬೇಕು. ಅಥವಾ ಬೇರೆ ಕಡೆ ಬರುವುದಾದರೆ ಬಹಳ ಸಂತೋಷ. ಸಂಪೂರ್ಣವಾಗಿ ಗ್ರಾಮೀಣ ಜನರಿಗೆ ಸಂಪೂರ್ಣವಾದಂಥ ಹತೋಟಿ ಕೊಡಬೇಕು, ಅವರಿಗೆ ವಿಶ್ವಾಸ ಬರುವ ರೀತಿಯಲ್ಲಿ ಇವೊತ್ತು ಕಾನೂನುಗಳನ್ನು ರಚಿಸಬೇಕು. ಗ್ರಾಮಾಂತರ ಪ್ರದೇಶದಲ್ಲಿರುವ ಸರ್ಕಾರಿ ಭೂಮಿಯಲ್ಲಿ ಗ್ರಾಮದ ಜನರು ಕಷ್ಟಪಟ್ಟು ರಕ್ಷಿಸಿಕೊಂಡು ಉಳಿಸಿರುವ ಜಮೀನಿಗೆ ಸಂಬಂಧಿಸಿದಂತೆ ನಿಯಮಾವಳಿ ರೂಪಿಸಿ ಸೆಕ್ಷನ್ 31ಕ್ಕೆ ಏನು ತಿದ್ದುಪಡಿ ತಂದಿದ್ದೀರಿ, ಇದು ಕ್ರಮಬದ್ಧವಾಗಿದೆ. ಹಿಂದೆ ಬ್ರಿಟಿಷರು ಪ್ರಿವಿಲೇಜ್‌ಗಳನ್ನು ಕೊಟ್ಟು ಅರಣ್ಯಗಳನ್ನು ಉಳಿಸಿ, ಬೆಳೆಸಿಕೊಂಡು ಬಂದಿದ್ದರೆ ಇವೊತ್ತು ನಾವು ಅದನ್ನು ಉಳಿಸಿಕೊಳ್ಳುವುದಕ್ಕೆ ಆಗದಿದ್ದರೂ ಹೊಸದಾಗಿ ಮಾಡುವಂಥ ಪ್ರಯತ್ನದಲ್ಲಿ ಅದಕ್ಕೆ ವಿಶೇಷವಾದ ಕಾನೂನು ಮಾಡುವುದು ಬಹಳ ಅಗತ್ಯವಿದೆ. ಆದುದರಿಂದ, ಅರಣ್ಯ ಸಚಿವರಾದ ಮಾನ್ಯ ಮಂಜುನಾಥ್‌ರವರಿಗೆ ಏನು ಜವಾಬ್ದಾರಿ ಕೊಟ್ಟಿದ್ದಾರೆ, ಇದರ ಬಗ್ಗೆ ನೀವಾದರೂ ಕುಳಿತು ಆಲೋಚಿಸಿ ಪ್ರಯತ್ನಿಸಿ. ಇದರ ಜೊತೆಗೆ ಇನ್ನೊಂದು ಸಲಹೆ ಕೊಡುವುದೇನೆಂದರೆ, ಈಗಲೂ ಕೂಡ ಕಂದಾಯ ಇಲಾಖೆಗೆ ಸೇರಿರುವ ಕಾನು ಇವೊತ್ತು ಖರಾಬ್ ಆಗಿವೆಯಲ್ಲಾ, ಅದನ್ನು ಏನಾದರೂ ಮಾಡಿ ಜಂಟಿ ಅರಣ್ಯ ಯೋಜನೆ ವ್ಯಾಪ್ತಿಯಲ್ಲಿ ಸೇರಿಸಿದರೆ ಕೊನೆಯ ಪಕ್ಷ ಅದರಿಂದಲಾದರೂ ರಕ್ಷಣೆಯಾಗುತ್ತದೆ. ಇಲ್ಲದೇ ಹೋದರೆ ಊರೂರುಗಳಲ್ಲಿ ಸೌದೆಗೋಸ್ಕರ ಹೊಡೆದಾಟವಾಗುತ್ತದೆ. ಏಕೆಂದರೆ, ಈ ಕಾನು ನಮ್ಮ ಊರಿನದೆಂದು ಇವರು ಹೇಳಿದರೆ, ಅದು ನಮ್ಮದೆಂದು ಅವರು ಹೇಳುವುದು. ಅದು ಸರ್ಕಾರಿ ಜಮೀನಾಗಿದ್ದು ಯಾರು ಬೇಕಾದರೂ ಹೋಗಿ ಸೌದೆ ತರಬಹುದು.

ಆದರೆ, ಜನರಿಗೆ ಅದು ಗೊತ್ತಾಗಿಲ್ಲ. ಇದು ನಮ್ಮ ಊರಿನದಾಗಿದ್ದು, ನಾವೇ ನೋಡಬೇಕು, ಯಾರೂ ಬರಕೂಡದು ಎಂಬಂಥ ಪರಿಸ್ಥಿತಿಯುಂಟಾಗಿದೆ. ಇದು ಬೇರೆ ಯಾವುದೇ ಲಾಭಕ್ಕಲ್ಲ, ತಮ್ಮ ಸ್ವಂತ ಉದ್ಯೋಗಕ್ಕಾಗಿ ಉಳಿಯಲಿ ಎನ್ನುವ ಕಾರಣಕ್ಕಾದರೂ ಕೆಲವು ಕಾನುಗಳು ಉಳಿಯುತ್ತವೆ, ಬೆಳೆಯುತ್ತವೆ ಎನ್ನುವುದಾದರೆ ಮಲೆನಾಡು ಪ್ರದೇಶದಲ್ಲಿರುವ ಕಾನುಗಳೇನಿವೆ, ಅವುಗಳನ್ನು ಏನಾದರೂ ಮಾಡಿ ಒಂದು ಸಾಮೂಹಿಕವಾಗಿ ಜಂಟಿ ಅರಣ್ಯ ಯೋಜನೆ ವ್ಯಾಪ್ತಿಯಲ್ಲಿ ತಂದು ಜಂಟಿ ಅರಣ್ಯ ಸಮಿತಿಯ ಕೈಗೆ ಕೊಟ್ಟರೆ ಯಾವ ಊರುಗಳಲ್ಲಿ ಅದು ಹ್ಯಾಮ್ಲೆಟ್ ಆಗಿರಬಹುದು, ಅಸಲಿ ಗ್ರಾಮಗಳಾಗಿರಬಹುದು, ಆ ಊರಿನ ಜನರಿಗೆ ಆಯಾ ಕಾನುಗಳ ಜವಾಬ್ದಾರಿ ಕೊಟ್ಟರೆ ಜಂಟಿ ಅರಣ್ಯ ಯೋಜನೆಯನ್ನು ಅದಕ್ಕೆ ಲಾಗು ಮಾಡಿ ಅರಣ್ಯ ಸಮಿತಿಗೆ ಕಾನುಗಳನ್ನು ಸೇರಿಸಿಕೊಂಡು ಅಲ್ಲಿ ಇನ್ನಷ್ಟು ಗಿಡ ಬೆಳೆಯಿರಿ, ಅದರ ರಕ್ಷಣೆ ಮಾಡಿಕೊಳ್ಳಿ. ಹೀಗೆ ಮಾಡುವುದರಿಂದ ನಮ್ಮ ಪೂರ್ವಿಕರು ನಿರ್ಮಿಸಿದ ಕಾನುಗಳು ಇವೊತ್ತು ಅರಣ್ಯವಾಗಿ ಉಳಿಯುತ್ತದೆ. ಯಾವ ಪೂರ್ವಿಕರು ಆ ಕಾನುಗಳಿಂದ ಗ್ರಾಮದ ಜನರಿಗೆ ಸಹಾಯವಾಗಲಿ, ಅದರ ಸೌಲಭ್ಯ ಸಿಗಲೆಂಬ ಏನು ಪ್ರಿವಿಲೇಜಸ್ ಕೊಟ್ಟಿದ್ದರು, ಅದೇ ರೀತಿಯ ಪ್ರಿವಿಲೇಜ್ ಈಗಲೂ ಗ್ರಾಮದ ಜನರಿಗೆ ಸಿಕ್ಕಿದರೆ ಖಂಡಿತವಾಗಿಯೂ ಅರಣ್ಯದ ರಕ್ಷಣೆಯಾಗುತ್ತದೆ. ಇಲ್ಲದಿದ್ದರೆ, ನಾವೇಕೆ ರಕ್ಷಣೆ ಮಾಡಬೇಕು ಎಂಬ ಧೋರಣೆ ತಾಳುತ್ತಾರೆ. ಈ ಟ್ರೀಸ್ ಆ್ಯಕ್ಟ್ ಅನ್ನು ಶ್ರೀಮಾನ್ ಕೆ.ಹೆಚ್ ಪಾಟೀಲರು ಇದ್ದಂಥ ಕಾಲದಲ್ಲಿ ತಂದಿದ್ದು. ಇದರ ಪ್ರಕಾರ ನನ್ನ ಸ್ವಂತ ಜಮೀನಿನಲ್ಲಿರುವ ಮರವನ್ನು ನಾನು ಕಡಿದು ಕೊಳ್ಳುತ್ತೇನೆ, ಅನುಮತಿ ಕೊಡಿ ಎಂದರೆ ಅದಕ್ಕಿರುವ ಸಮಸ್ಯೆಗಳ ಬಗ್ಗೆ ಆಗಲೇ ಮಾನ್ಯ ಸದಸ್ಯರುಗಳಾದ ಅರಗ ಜ್ಞಾನೇಂದ್ರ ಹಾಗೂ ಪ್ರತಾಪಚಂದ್ರಶೆಟ್ಟಿಯವರು ಹೇಳಿದರಲ್ಲಾ, ಇದು ನಿಜವಾಗಿಯೂ ಹೌದು. ಇದಕ್ಕಿಂತಲೂ ರಾಕ್ಷಸಿ ಪ್ರವೃತ್ತಿ ಬೇರೆ ಇಲ್ಲ. ನನ್ನ ಭೂಮಿ, ಅನುಮತಿ ಪಡೆದು ಕಾನೂನು ಪ್ರಕಾರ ಮರ ಕಡಿದುಕೊಳ್ಳಬೇಕು, ಎಷ್ಟು ಕಡಿಯಬೇಕೋ ಅಷ್ಟು ಕಡಿಯಬೇಕು. ಅದಕ್ಕೋಸ್ಕರ, ಮೂರು ತಿಂಗಳು, ಆರು ತಿಂಗಳು, ಒಂದು ವರ್ಷ ಕಾಯಬೇಕೇ? ನಾನು ಅರ್ಜಿ ಕೊಟ್ಟು ಒಂಭತ್ತು ತಿಂಗಳಾದರೂ ಇನ್ನು ಅನುಮತಿ ಸಿಕ್ಕಿಲ್ಲವೆಂದು ಮಾನ್ಯ ಹಿರಿಯ ಸದಸ್ಯರು ಹೇಳಿದರು. ಈ ತರಹ ಆದರೆ ಜನರು ರೋಸಿ ಹೋಗಿ ಕೊನೆಗೆ ಯಾರನ್ನೂ ಕೇಳದೆ ರಾತ್ರೋರಾತ್ರಿ ಕಡಿದುಕೊಂಡು ಮನೆ ಕಟ್ಟಿಕೊಳ್ಳುತ್ತಾರೆ ಮತ್ತು ನೀನ್ಯಾರು ಕೇಳುವುದಕ್ಕೆ ಎಂದು ಹೇಳುತ್ತಾರೆ. ಈಗ ಕೇಳುವುದಿಲ್ಲ, ಆ ಸ್ಥಿತಿ ಬಂದಿದೆ. ಸದನದಲ್ಲಿ ಈಗ ಸಚಿವರಾದ ನಾಣಯ್ಯನವರು ಇದ್ದಾರೆ, ಅವರಿಗೆ ಮಲೆನಾಡಿನ ಪರಿಸ್ಥಿತಿ ಗೊತ್ತಿದೆ, ನೀವೂ (ಅರಣ್ಯ ಸಚಿವರು) ಅಭ್ಯಾಸ ಮಾಡಿ. ನನ್ನ ಸ್ವಂತ ಜಮೀನಿನಲ್ಲಿ ನಾನೇ ನೆಟ್ಟು ಬೆಳೆಸಿದಂಥ ಮರಗಳನ್ನು ಸುಲಭವಾಗಿ ಕತ್ತರಿಸಿಕೊಂಡು ಅದರ ಉಪಯೋಗ ಪಡೆಯುವುದಕ್ಕೆ ನನಗೆ ಅವಕಾಶವಿಲ್ಲವೆಂದು ಹೇಳಿದರೆ ನನಗೆ ರೋಸಿ ಹೋಗಿ ಸಿಟ್ಟು ಬಂದು ನನ್ನ ಮನಸ್ಸು ಕೆಡಿಸುವಂಥ ವ್ಯವಸ್ಥೆ ಈ ಒಂದು ಕಾನೂನಿನಿಂದ ಆಗುವುದಾದರೆ ಯಾರ ಸಂರಕ್ಷಣೆಗಾಗಿ, ಯಾರ ಉದ್ಧಾರಕ್ಕಾಗಿ ಈ ಕಾನೂನುಗಳು ಇರಬೇಕು? ಹಾಗೆ ಮಾಡಿದರೆ ಯಾರಾದರೂ ರಕ್ಷಿಸಲು ಮುಂದೆ ಬರುತ್ತಾರೆಯೇ? ಸಹಕಾರ ಕೊಡುತ್ತಾರೆಯೇ? ಇದರ ಬಗ್ಗೆ ವಿಚಾರ ಮಾಡಿ. ಅದಕ್ಕೆ ತಾವು ಹಿರಿಯರಿದ್ದೀರಿ, ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇವೆರಡೂ ವಿಚಾರದಲ್ಲಿ ಸ್ವಲ್ಪ ನಮ್ಮ ಕಡೆ ಬಂದು ಆಲೋಚನೆ ಮಾಡಿ

ಕಾರ್ಯಪ್ರವೃತ್ತರಾದರೆ ಖಂಡಿತವಾಗಿಯೂ ಒಂದಿಷ್ಟು ಸಹಾಯವಾಗುತ್ತದೆ, ಒಂದಿಷ್ಟು ಅರಣ್ಯ ಉಳಿಯುತ್ತದಾದ್ದರಿಂದ ಇದಕ್ಕೆ ಏನಾದರೊಂದು ಒಳ್ಳೆಯ ಯೋಜನೆ ರೂಪಿಸುವುದಕ್ಕಾಗುತ್ತದೆಯೇ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಈಗ ತಾವು ಏನು ತಿದ್ದುಪಡಿ ತಂದಿದ್ದೀರಿ, ಈಗ ನಾನು ಸಲಹೆ ಮಾಡುವವನಿದ್ದೆ. ಜಂಟಿ ಅರಣ್ಯ ಯೋಜನಾ ದೃಷ್ಟಿಯಿಂದ ಒಂದು ಜಂಟಿ ಸಲಹಾ ಸಮಿತಿಯನ್ನಾದರೂ ಮಾಡಿ ಒಂದು ವ್ಯಾಪಕ ಕಾರ್ಯಕ್ರಮ ರೂಪಿಸಿ ಅದು ರಕ್ಷಣೆಯಾಗುವುದಕ್ಕೆ ಉತ್ತಮ ರೀತಿಯಲ್ಲಿ ಕಾರ್ಯಗತವಾಗುವುದಕ್ಕೆ ಕಾನೂನು ತರಬೇಕಾದಂಥ ಅಗತ್ಯ ಇವೊತ್ತು ಇದೆ. ಇದಕ್ಕೆ ತೇಪೆ ಹಾಕುವ ಕೆಲಸ ಮಾಡಬೇಡಿ. ಏಕೆಂದರೆ, ನಾನು ಸಮಿತಿಯಲ್ಲಿದ್ದೆ, ವಿಚಾರ ಮಾಡಿದೆ ಹೋಗಿ ನೋಡೋಣವೆಂದು ಹೇಳಿದೆ. ಜಂಟಿ ಅರಣ್ಯ ಸಮಿತಿಯಿಂದ ಬೇರೆ ದೇಶದವರು ದುಡ್ಡು ಮಾಡುತ್ತಾರೆ, ಅದನ್ನು ಇಲ್ಲಿ ಖರ್ಚು ಮಾಡುತ್ತಾರೆಂದು ಮಾನ್ಯ ಸದಸ್ಯರಾದ ಪ್ರತಾಪಚಂದ್ರಶೆಟ್ಟಿಯವರು ಹೇಳಿದರು. ಇವೊತ್ತು ಇದರಲ್ಲಿ ಅಧಿಕಾರಿಗಳ ವ್ಯವಹಾರ ನಡೆದಿದೆಯೇ ವಿನಾ ಜನರದಲ್ಲ, ಹೆಸರಿಗೆ ಜನರದ್ದು, ಇದನ್ನು ದೋಚುವುದಕ್ಕೆ ಅಧಿಕಾರಿಗಳು! ಅವನ ಹೆಸರು, ಇವನಿಗೆ ಕೆಸರು, ಹೀಗಾಗಿದೆ, ಇದು ಆಗಬಾರದು. ಈ ದಿಸೆಯಲ್ಲಿ ಹೊಸ ಯೋಜನೆಗಳು, ವಿಚಾರಗಳು ಕಾರ್ಯರೂಪಕ್ಕೆ ಬರಬೇಕಾದರೆ, ಅದಕ್ಕೆ ಬೇಕಾದಂಥ ಒಂದು ಕಾನೂನಿನ ಅಗತ್ಯವಿದೆಯೆನ್ನುವ ಮಾತನ್ನು ನಾನು ಹೇಳುತ್ತೇನೆ. ಇದಕ್ಕೆ ಹಿರಿಯರಾದ ಶ್ರೀ ಮಂಜುನಾಥ್‌ರವರು ಜವಾಬ್ದಾರಿ ತೆಗೆದುಕೊಂಡಿದ್ದಾರೆ. ನಿಮ್ಮ ಅವಧಿಯಲ್ಲಾದರೂ ಬೇಕಾದರೆ ಇದಕ್ಕೆ ವಿಲೇಜ್ ಫಾರೆಸ್ಟ್ ಎಂದಾದರೂ ಕರೆಯಿರಿ, ಹೊಸ ಗ್ರಾಮ ಅರಣ್ಯವೆಂದಾದರೂ ಕರೆಯಿರಿ, ಅದಕ್ಕೆ ಏನಾದರೊಂದು ಹೆಸರು ಕೊಟ್ಟು ಅದನ್ನು ಬೇರೆ ವ್ಯಾಪ್ತಿಯಲ್ಲಿ ತರುವ ಕೆಲಸ ಮಾಡಿದರೆ ತುಂಬಾ ಸಹಾಯವಾಗುತ್ತದೆ. ಇದು ತೀರಾ ಅನಿವಾರ್ಯವಾಗಿ ಆಗಬೇಕಾಗಿರುವಂತಾದ್ದು. ಇವೊತ್ತು ಕೃಷಿ ಸಚಿವರಾದ ಬೈರೇಗೌಡರು ಇಲ್ಲಿದ್ದಾರೆ. ಏಕೆಂದರೆ, ಇವರ ಊರಿನಲ್ಲಿ ರಾಗಿ ಬೆಳೆಯುವುದನ್ನು ಬಿಟ್ಟು ಈಗ ನೀಲಗಿರಿ ಮರಗಳನ್ನು ಹಾಕಲು ಹೊರಟಿದ್ದಾರೆ. ಈಗ ಅದನ್ನು ಜಂಟಿ ಅರಣ್ಯ ಯೋಜನೆ ವ್ಯಾಪ್ತಿಗೆ ಸೇರಿಸಿದರೆ ಅಂತಹ ಕಡೆ ಕಾಡು ಬರುವುದರಲ್ಲಿ ಆಶ್ಚರ್ಯವಿಲ್ಲ. ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಬಹಳ ಕಳಕಳಿಯಿಂದ ವಿನಂತಿಸಿಕೊಂಡು ಈ ದಿಸೆಯಲ್ಲಿ ಸ್ವಲ್ಪ ಚಿಂತಿಸಬೇಕೆಂದು ಹೇಳಬಯಸುತ್ತೇನೆ.

+ ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಕಾನು ಬೆಳೆಸಬೇಕೆಂದರು. ಉತ್ತರ ಕನ್ನಡದಲ್ಲಿ ಬೆಟ್ಟ, ಹಾಡಿ ಎಂದು ಹೇಳುತ್ತಾರೆ. ಬೆಟ್ಟ, ಹಾಡಿ, ಕಾನು ಮುಂತಾದವುಗಳನ್ನು ಜಂಟಿ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿ ಬರುವಂತೆ ಸೇರಿಸಿಕೊಳ್ಳುವುದು ಒಳ್ಳೆಯದು.

+ ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮತ್ತು ಇತರೆ ಸ್ನೇಹಿತರು ವಿಲೇಜ್ ಫಾರೆಸ್ಟ್ ಕಮಿಟಿಗಳ ಬಗ್ಗೆ ಹೆಚ್ಚು ಮಾತನಾಡಿದ್ದಾರೆ. ಈ ವಿಲೇಜ್ ಫಾರೆಸ್ಟ್ ಕಮಿಟಿಗಳು ನ್ಯಾಷನಲ್ ಫಾರೆಸ್ಟ್ ಪಾಲಿಸಿ ಪ್ರಕಾರ ಮಾಡಿದ್ದು, ಇವು 1993ರಿಂದ ಜಾರಿಗೆ ಬಂದಿವೆ. ಇವು

ಸರಿಯಾಗಿ ನಡೆಯುತ್ತಿವೆ ಎಂದು ಹೇಳಲು ನಾನು ತಯಾರಿಲ್ಲ. ಏಕೆಂದರೆ ಬೆಳಿಗ್ಗೆ ನಮ್ಮ ಮಿತ್ರರಾದ ಜ್ಞಾನೇಂದ್ರರವರು ಈ ವಿಲೇಜ್ ಕಮಿಟಿಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಇವುಗಳನ್ನು ಮಾಡಿದ ಉದ್ದೇಶ ಒಳ್ಳೆಯದು. ಏಕೆಂದರೆ ಆ ಗ್ರಾಮದ ಕೆಲವರನ್ನು ಇದರಲ್ಲಿ ಇನ್‌ವಾಲ್ವ್ ಮಾಡಿದರೆ ಅರಣ್ಯಗಳು ಉಳಿಯುತ್ತವೆ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಅದರಲ್ಲಿ ಒಬ್ಬರು ವಿಲೇಜ್ ಅಕೌಂಟೆಂಟ್, ಒಬ್ಬರು ಫಾರೆಸ್ಟ್ ಗಾರ್ಡ್, ಅಲ್ಲಿಯ ಪಂಚಾಯಿತಿಯ ಕೆಲವು ಸದಸ್ಯರು ಮತ್ತು ಒಬ್ಬಿಬ್ಬರು ಮಹಿಳೆಯರೂ ಇರುತ್ತಾರೆ. ಇವು ಸಮರ್ಪಕವಾಗಿ ಕೆಲಸ ಮಾಡುತ್ತಿವೆ ಎಂದು ಹೇಳಲು ನಾನು ತಯಾರಿಲ್ಲ. ಮಲೆನಾಡಿನಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರುಗಳಿಗೆ ನನಗಿಂತ ಚೆನ್ನಾಗಿ ಇದರ ಬಗ್ಗೆ ಗೊತ್ತು. ನಾನು ಬಯಲುಸೀಮೆ ಪ್ರದೇಶದಿಂದ ಬಂದಿರುವವನು. ಈಗ ನಾನು ಅಲ್ಲಿ ತಿರುಗಾಡಿ ಇವುಗಳು ಸಮರ್ಪಕವಾಗಿ ಕೆಲಸ ಮಾಡುವಂತೆ ಮಾಡಲು ಪ್ರಯತ್ನ ಮಾಡುತ್ತೇನೆ. ಈಗ ಬಹುತೇಕ ಅರಣ್ಯಗಳು ಹಾಳಾಗುತ್ತಿವೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪವಾದರೂ ಜವಾಬ್ದಾರಿ ಇರಬೇಕಾಗುತ್ತದೆ ಎಂದು ಈ ಕಮಿಟಿಗಳನ್ನು ಮಾಡಲಾಗಿದೆ. ಅದರಿಂದ ಬರತಕ್ಕಂಥ ಉತ್ಪತ್ತಿಯಲ್ಲಿ ಅರ್ಧ ಸರ್ಕಾರಕ್ಕೆ ಬಂದರೆ, ಉಳಿದರ್ಧ ವಿಲೇಜ್‌ಗೆ ಹೋಗುತ್ತದೆ. ಅದನ್ನು ವಿಲೇಜ್ ಇಂಪ್ರೂವ್‌ಮೆಂಟ್‌ಗೆ ಉಪಯೋಗಿಸಬೇಕು ಎಂದು ಮಾಡಿದ್ದೇವೆ. ತಾವು ಏನು ಸಲಹೆ ಕೊಟ್ಟಿದ್ದೀರಿ, ಅದರಂತೆ ಈ ಕಮಿಟಿಗಳು ವ್ಯವಸ್ಥಿತವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಕಮಿಟಿಗಳು ಎಲ್ಲಾ ಕಡೆ ರಚನೆಯಾಗಿಲ್ಲ. ಇನ್ನೂ ಕೆಲವು ಕಡೆ ರಚನೆಯಾಗಬೇಕಾಗಿದೆ. ಬಯಲು ಸೀಮೆ ಪ್ರದೇಶಗಳಲ್ಲಿ ಈ ಕಮಿಟಿಗಳು ರಚನೆಯಾಗಿಲ್ಲ. ಮೊನ್ನೆ ನಾನು ರಾಯಚೂರಿಗೆ ಹೋಗಿದ್ದೆ, ಅಲ್ಲಿ ಈ ರೀತಿಯ ಕಮಿಟಿಯನ್ನು ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದರು. ಎಲ್ಲಿ ನಮ್ಮ ಚಟುವಟಿಕೆಗಳು ನಡೆಯುತ್ತಿವೆ ಅಲ್ಲಿ ಮಾತ್ರ ಈ ಕಮಿಟಿಗಳ ರಚನೆಯಾಗಿದೆ. ಅದಕ್ಕೋಸ್ಕರ ಈಗ ಎಲ್ಲಾ ಕಡೆ ಕಮಿಟಿಗಳನ್ನು ರಚನೆ ಮಾಡುವುದು ಒಳ್ಳೆಯದು. ತಿಮ್ಮಪ್ಪನವರು ಹೇಳಿದ ಹಾಗೆ ಹಿಂದಿನಿಂದಲೂ ಕೆಲವು ಹಳ್ಳಿಗಳವರು ಅರಣ್ಯವನ್ನು ಉಳಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಈ ಕಮಿಟಿಗಳು ವ್ಯವಸ್ಥಿತವಾಗಿ ನಡೆಯುವ ರೀತಿಯಲ್ಲಿ ನಾನೂ ಸಹ ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ ಎಂದು ಹೇಳುತ್ತೇನೆ. ಇದರ ಜೊತೆಗೆ ನಾವು ಇದರಲ್ಲಿ ಕೆಲವು ಪ್ರಾವಿಷನ್‌ಗಳನ್ನು ಮಾಡಿದ್ದೇವೆ. ಕೆಲವು ವಸ್ತುಗಳನ್ನು ನಾವು ಫಾರೆಸ್ಟ್ ಪ್ರೊಡ್ಯೂಸ್ ಎಂದು ಮಾಡಬೇಕಾಗಿದೆ. ಹಾಲಮಡ್ಡಿ, ಗ್ರೇಷಿಯಂ ಫ್ರೂಟ್, ಥಾರ್ನ್‌ಲೆಸ್ ಬಾಮ್ ಇವುಗಳನ್ನು ಫಾರೆಸ್ಟ್ ಪ್ರಾಡ್ಯೂಸ್ ಎಂದು ಮಾಡಿದ್ದೇವೆ. ಅದರ ಜೊತೆಗೆ, ನಾನು ಈಗಾಗಲೇ ಹೇಳಿದ ಹಾಗೆ ಗಂಧದ ಮರ ಕಡಿದರೆ ಮತ್ತು ಅದನ್ನು ಸಾಗಾಣಿಕೆ ಮಾಡಿದರೆ ಅದನ್ನು ಮುಟ್ಟುಗೋಲು ಹಾಕುವಾಗ, ಅದನ್ನು ಸಾಗಿಸುತ್ತಿದ್ದಂಥ ವಾಹನವನ್ನೂ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಪ್ರಾವಿಷನ್ ಮಾಡಿದ್ದೇವೆ. ಅದೇ ರೀತಿಯಲ್ಲಿ ಗಂಧದ ಎಣ್ಣೆಯನ್ನು ಬೇರೆ ಕಡೆಗಳಲ್ಲಿ ಸ್ಮಗಲ್ ಮಾಡುತ್ತಿದ್ದರೆ ಅದನ್ನೂ ಸಹ ಹಿಡಿಯಬೇಕು ಎಂದು ಇದರಲ್ಲಿ ಪ್ರಾವಿಷನ್ ಮಾಡಿದ್ದೇವೆ. ಅದರ ಜೊತೆಗೆ ಗುಳಮಾವು, ದಾಲ್ಚಿನ್ನಿ, ಹಾಲಮಡ್ಡಿ ಇತ್ಯಾದಿ ಮರಗಳ ತೊಗಟೆಯನ್ನು ಕಿತ್ತುಬಿಡುತ್ತಾರೆ. ತೊಗಟೆಯನ್ನು ಕಿತ್ತಾಗ ಆ ಮರವೂ ಸತ್ತು ಹೋಗುತ್ತದೆ. ಆ ತೊಗಟೆಯನ್ನು ಊದುಬತ್ತಿ ಮಾಡಲು ಉಪಯೋಗಿಸುತ್ತಾರೆ. ಅದಕ್ಕೋಸ್ಕರವಾಗಿ ಆ ತೊಗಟೆಯನ್ನು

ಸಾಗಿಸಿದರೆ ಅದನ್ನೂ ಸಹ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಮಾಡಿದ್ದೇವೆ. ನಮ್ಮ ಸಹೋದರಿ ಪ್ರಮೀಳಾರವರು ಹೇಳಿದರು, Criminal liability has been fixed on persons employed by licence and also making the company responsible where the offence is committed by a Company,.... ಎನ್ನುವ ಬಗ್ಗೆ ಅವರು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಮುಂದೆ ನೋಡೋಣ. ಏಕೆಂದರೆ ಒಂದು ಸಾರಿ ತಿದ್ದುಪಡಿ ಮಾಡಿದರೆ ಅದು ಶಾಶ್ವತವಾಗಿ ಇರುವುದಿಲ್ಲ. ಇನ್ನು ಮುಂದೆಯೂ ತಿದ್ದುಪಡಿಗಳನ್ನು ತರಬಹುದು. ಅನೇಕ ಮಾನ್ಯ ಸದಸ್ಯರುಗಳು ಕೊಟ್ಟಿರುವ ಸಲಹೆಗಳ ಪ್ರಕಾರ ತಿದ್ದುಪಡಿಗಳನ್ನು ಒಂದು ಸಲವಲ್ಲ, ಎರಡು ಸಲ ತರಬಹುದು. ಇದು ಮೇಲ್ಮನೆಯಲ್ಲಿ ಪಾಸ್ ಆಗಿ ಇಲ್ಲಿಗೆ ಬಂದಿದೆ. ಮಾನ್ಯ ಜ್ಞಾನೇಂದ್ರ ಅವರು ಕೆಲವು ವಿಷಯಗಳ ಬಗ್ಗೆ ಮತ್ತೆ ಮಾತನಾಡಿದ್ದಾರೆ. ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ. ಮಾನ್ಯ ಶಿವಪ್ಪನವರು ಹೇಳಿದ ಹಾಗೆ ಸರಳೀಕರಣ ಮಾಡಲು ಪ್ರಯತ್ನ ಮಾಡುತ್ತೇನೆ. ತನ್ನ ಜಮೀನಿನಲ್ಲಿ ಬೆಳೆದಂಥ ಮರವನ್ನು ಕಡಿದು ಅದು 20 ಸಾವಿರ ಬೆಲೆಯುಳ್ಳದ್ದಾದರೆ ಅದಕ್ಕಾಗಿ ಅವರು ಡಿ ಎಫ್‌ಓ ಕಛೇರಿಗೆ, ಆರ್‌ಎಫ್‌ಓ ಕಛೇರಿಗೆ ಓಡಾಡುವುದು ಸರಿಯಲ್ಲ. ಅದನ್ನು ಸರಳೀಕರಣಗೊಳಿಸುವುದಕ್ಕೆ ಯೋಚನೆ ಮಾಡಿದ್ದೇವೆ. ನಾನು ನಮ್ಮ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ ಅದನ್ನು ಯಾವ ರೀತಿ ಮಾಡಬೇಕು ಎಂದು ಯೋಚನೆ ಮಾಡುತ್ತೇನೆ. ಒಟ್ಟಿನಲ್ಲಿ ಅರಣ್ಯವನ್ನು ಬೆಳೆಸಬೇಕು. ಕಾಂಪೌಂಡಿಂಗ್‌ಗೆ ಮೊದಲಿನಿಂದಲೂ ಪ್ರಾವಿಷನ್ ಇದೆ. ಪ್ರತಿಯೊಂದಕ್ಕೂ ಕೇಸ್ ಹಾಕಿಕೊಂಡು ಹೋದರೆ ಆಗುವುದಿಲ್ಲ. ಅದಕ್ಕೋಸ್ಕರ ಅಲ್ಲೇ ರಾಜಿ ಮಾಡಿಬಿಟ್ಟು, ಇದಕ್ಕೆ ಇರುವಂಥ 5 ಸಾವಿರ ರೂಪಾಯಿಗಳನ್ನು ಗರಿಷ್ಠ 50 ಸಾವಿರಗಳವರೆಗೆ ಮಾಡಬೇಕು ಎಂದು ಪ್ರಾವಿಷನ್ ಮಾಡಿದ್ದೇವೆ. ಒಟ್ಟಿನಲ್ಲಿ ಕಳ್ಳಸಾಗಾಣಿಕೆ ಆಗಬಾರದು ಎಂದು ಇದನ್ನು ಮಾಡಿದ್ದೇವೆ. ಮರಗಳನ್ನು ಕಡಿದು ಸಾಗಿಸುವುದು, ನಂತರ ಅವನನ್ನು ಎಳೆದುಕೊಂಡು ಬರುವುದು ಇವೇ ಆಗುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇವತ್ತು ಅನೇಕ ಮರಗಳು ಗೆದ್ದಲು ಹತ್ತಿ ಯಾವುದೇ ಪ್ರಯೋಜನಕ್ಕೂ ಬರದ ಹಾಗೆ ಆಗಿವೆ. ವರ್ಷಾನುಗಟ್ಟಲೆ ಅಲ್ಲಿ ಬಿದ್ದಿರುತ್ತವೆ. ಸಾಗಿಸುತ್ತಿದ್ದಂಥ ವಾಹನ ಸಹ ಅಲ್ಲೇ ಇರುತ್ತದೆ. ಅವುಗಳು ಮಣ್ಣಾಗಿ, ಗೆದ್ದಲು ಹತ್ತಿವೆ. ಅದಕ್ಕೋಸ್ಕರ ಇದು ಆಗದ ರೀತಿಯಲ್ಲಿ ಮಾಡಬೇಕೆಂದು, ಯಾರೂ ಕ್ಲೈಂ ಮಾಡದಿದ್ದರೆ ಅಂಥಾದ್ದನ್ನು ಇಲಾಖೆಯ ಹರಾಜು ಮಾಡಿ ಬಂದ ಹಣವನ್ನು ತೆಗೆದುಕೊಳ್ಳುವುದಕ್ಕೆ ಪ್ರಾವಿಷನ್ ಮಾಡಿದ್ದೇವೆ. ನಮ್ಮಲ್ಲಿ ಅರಣ್ಯ ಸಂಪತ್ತು ಬಹಳ ಇದೆ. ರಾಷ್ಟ್ರದಲ್ಲಿ ಇವತ್ತು ನದಿಗಳು ಮತ್ತು ಖನಿಜಗಳು ಯಾವ ರೀತಿ ರಾಷ್ಟ್ರದ ಸಂಪತ್ತೋ ಅದೇ ರೀತಿಯಲ್ಲಿ ಅರಣ್ಯ ಕೂಡ ರಾಷ್ಟ್ರದ ಸಂಪತ್ತು. ಈ ಸಂಪತ್ತನ್ನು ಬೆಳೆಸುವುದಕ್ಕೆ ಮತ್ತು ಉಳಿಸುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು. ಆ ಉದ್ದೇಶದಿಂದ ನಾವು ವಿಲೇಜ್ ಕಮಿಟಿಗಳನ್ನು ಮಾಡಬೇಕು. ಆ ಗ್ರಾಮದವರನ್ನೂ ಸಹ ಇನ್‌ವಾಲ್ವ್ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದೇವೆ. ಅದರಿಂದ ಬರತಕ್ಕ ಉತ್ಪತ್ತಿಯಲ್ಲಿ ಅವರಿಗೂ ಸಹ ಪಾಲು ಹೋಗುತ್ತದೆ. ಆ ರೀತಿ ಕಮಿಟಿಗಳನ್ನು ಆ್ಯಕ್ಟೀವ್ ಮಾಡಿ ಅಲ್ಲಿ ಯಾವುದೇ ರೀತಿ ದುರುಪಯೋಗವಾಗದ ರೀತಿಯಲ್ಲಿ ಮಾಡಿದ್ದೇವೆ. ಮತ್ತು ಅಧಿಕಾರಿಗಳದ್ದೇ ಮೇಲ್ಮಟ್ಟದಲ್ಲಿ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ನಾನೂ ಸಹ ಎಲ್ಲಾ ಕಡೆಗೆ ಹೋಗುತ್ತೇನೆ ಮತ್ತು ವಿಶೇಷವಾಗಿ ಮಲೆನಾಡು

ಪ್ರದೇಶಗಳಲ್ಲಿ ಈ ಕಮಿಟಿಗಳು ವ್ಯವಸ್ಥಿತವಾಗಿ ನಡೆಯುವುದಕ್ಕೆ ನಾನು ಸರ್ವ ಪ್ರಯತ್ನವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಿ, ಮಾನ್ಯ ಸದಸ್ಯರು ಈ ತಿದ್ದುಪಡಿ ಮಸೂದೆಗೆ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೇ, ತಮ್ಮ ಸ್ವಂತ ಜಾಗದಲ್ಲಿ ಬೆಳೆಯತಕ್ಕಂಥ ಅಂಟುವಾಳ, ಸೀಗೆ ಇಂಥ ವಸ್ತುಗಳನ್ನೂ ಕೂಡ ಕೋಕೋಬೀನ್ಸ್ ಎಂದು ಸೆಕ್ಷನ್ 7ರಲ್ಲಿ ಫಾರೆಸ್ಟ್ ಪ್ರೊಡ್ಯೂಸ್ ಎಂದು ತಂದಿದ್ದೀರಿ. ಅಂಟುವಾಳ, ಸೀಗೆ, ಮತ್ತು ಇತರೆ ವಸ್ತುಗಳನ್ನು ನಾವು ಸ್ವಂತ ಜಾಗದಲ್ಲಿ ಬೆಳೆಯುತ್ತೇವೆ. ಫಾರೆಸ್ಟ್ ಪ್ರೊಡ್ಯೂಸ್ ಎನ್ನುವಂಥ ಲಿಸ್ಟ್‌ನಲ್ಲಿ ಇವುಗಳು ಬಂದಿರುವುದರಿಂದ ಬಹಳ ಹೆರ್‍ಯಾಸ್‌ಮೆಂಟ್ ಆಗುತ್ತಿದೆ.. ಅದನ್ನೂ ಕೂಡ ಸೇರಿಸಬೇಕು.

ಶ್ರೀ ಡಿ. ಮಂಜುನಾಥ್ : ಈಗಾಗಲೇ ಶಿವಪ್ಪನವರು ಹೇಳಿದಂತೆ ಅದು ನನಗೆ ಗೊತ್ತಿದೆ. ರೈತ ತನ್ನ ಸ್ವಂತ ಜಮೀನಿನಲ್ಲಿ ಬೆಳೆದಂಥ ಮರಗಳನ್ನು ಕಡಿದು, ಅದನ್ನು ಮಾರಾಟ ಮಾಡುವುದಕ್ಕೆ ಹೋದರೆ ಬಹಳ ಪ್ರೊಸೀಜರ್ ಇದೆ. ಅದನ್ನು ಸರಳೀಕರಣ ಮಾಡಬೇಕು ಎಂದು ಹೇಳಿದ್ದೀರಿ. ಅದರ ಬಗ್ಗೆ ನಾನು ಚಿಂತನೆ ಮಾಡುತ್ತೇನೆ. ನಮ್ಮ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ, ಯಾವ ರೀತಿ ಮಾಡಿದರೆ ತೊಂದರೆಯಾಗುವುದಿಲ್ಲ ಆ ರೀತಿ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರಕ್ಕೆ) : ಸ್ವಂತ ಜಾಗದಲ್ಲಿ ಯಾರಾದರೂ ಬರೀ ಮರಗಳನ್ನೇ ಬೆಳೆಯುತ್ತೇವೆ ಎಂದು ಮುಂದೆ ಬಂದರೆ ಸರ್ಕಾರ ಅವರಿಗೆ ಪ್ರೋತ್ಸಾಹ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಕೇಳುತ್ತೇನೆ. ಈಗ ನಾವು ಕಾಫಿ ಬೆಳೆಯುತ್ತಿದ್ದೇವೆ. ನಾವು ಕಾಫಿ ಬೆಳೆಯುವುದನ್ನು ಬಿಡುತ್ತೇವೆ, ನಂತರ ಹತ್ತಾರು ಎಕರೆಯಲ್ಲಿ ಮರವನ್ನೇ ಬೆಳೆಯುತ್ತೇವೆ ಎಂದರೆ, ಸರ್ಕಾರ ಆ ಕಡೆ ಗಮನ ಹರಿಸಿ ಆ ರೀತಿ ಮರ ಬೆಳೆಯುವಂಥವರಿಗೆ ಪ್ರೋತ್ಸಾಹವಾಗಿ ಏನಾದರೂ ಸಹಾಯ ಮಾಡಲು ಸಾಧ್ಯವಿದೆಯೇ?

ಶ್ರೀ ಡಿ. ಮಂಜುನಾಥ್ : ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಪರ್ಯಾಲೋಚನಾ ಪ್ರಸ್ತಾಪ

ಉಪಾಧ್ಯಕ್ಷರು : ಪ್ರಸ್ತಾವವೇನೆಂದರೆ, ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 1997ರ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು : "ಖಂಡ 2 ಮತ್ತು 3, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಮಯಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಮಯಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 1997ರ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 1997ರ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಸಭಾಪತಿಯವರು : ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲ್ಪಟ್ಟಿತು.

(ಸದನವು ಸಂಜೆ 7 ಗಂಟೆ 40 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 16ನೇ ಏಪ್ರಿಲ್ 1998ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿರ್ಧರಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)